ದೆಹಲಿ ಕರ್ನಾಟಕ ಸಂಘದ

# ಅಭಿಮತ

ಫೆಬ್ರವರಿ 2023
ಬೆಲೆ ರೂ. 1

## ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಕರ್ನಾಟಕದ ಅನನ್ಯತೆ ಮತ್ತು ಅಸ್ಮಿತೆಯನ್ನು ಎತ್ತಿ ಹಿಡಿದ ನಾರಿ ಶಕ್ತಿ ಸ್ತಬ್ಧಚಿತ್ರ









## ಅಮೃತ ಮಹೋತ್ಸವ ಸಂಭ್ರಮದಲ್ಲಿ ವಿಜೃಂಭಿಸಿದ ಅಖಂಡ ಬೆಂಗಳೂರು, ರಾಮನಗರ ಜಿಲ್ಲಾ ಸಾಂಸ್ಕೃತಿಕ ಉತ್ಸವ

**ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಮಾರೋಪ ಕಾರ್ಯಕ್ರಮಕ್ಕೆ ಮಂತ್ರಿಗಳು, ಸಂಸದರು, ಕಲಾವಿದರು, ಗಣ್ಯಾತಿ ಗಣ್ಯರನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಪದಾಧಿಕಾರಿಗಳು ಮತ್ತು ಸದಸ್ಯರೊಂದಿಗೆ ಆಹ್ವಾನಿಸುತ್ತಿರುವುದು**



ಶ್ರೀ ಬಿ.ಎಲ್. ಸಂತೋಷ್
ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ



ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ರಾಜ್ಯ ಸಚಿವೆ
ಮಾನ್ಯ ಶೋಭಾ ಕರಂದ್ಲಾಜೆ



ಶ್ರೀ ಅಶ್ವಿನಿ ವೈಷ್ಣವ್, ಮಾನ್ಯ ಕೇಂದ್ರ ರೈಲ್ವೇ, ಸಂಪರ್ಕ, ಎಲೆಕ್ಟ್ರಾನಿಕ್ಸ್ ಮತ್ತು
ಮಾಹಿತಿ ತಂತ್ರಜ್ಞಾನ ಸಚಿವರು



ಶ್ರೀ ಎಸ್. ಮುನಿಸ್ವಾಮಿ, ಸಂಸದರು, ಕೋಲಾರ ಲೋಕಸಭಾ ಕ್ಷೇತ್ರ



ಸನ್ಮಾನ್ಯ ಶ್ರೀ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ



ಶ್ರೀ ಹಂಸಲೇಖ, ಕನ್ನಡ ಚಿತ್ರರಂಗದ
ಜನಪ್ರಿಯ ಸಂಗೀತ ನಿರ್ದೇಶಕರು



ಚಲನಚಿತ್ರ ನಟಿ ಶ್ರೀಮತಿ ಶ್ರುತಿ



ಶ್ರೀ ಧನಂಜಯ
ಗುರೂಜಿ, ಬಿದನಗೆರೆ
ಕುಣಿಗಲ್



ಕನ್ನಡ ಚಿತ್ರರಂಗದ ಪ್ರಖ್ಯಾತ ಗಾಯಕ ಹಿನ್ನೆಲೆ ಗಾಯಕ ಶ್ರೀ ವಿಜಯ್
ಪ್ರಕಾಶ್ ಮತ್ತು ಗಾಯಕ, ಸಂಗೀತ ಸಂಯೋಜಕ ಶ್ರೀ ಅರ್ಜುನ್ ಜನ್ಯ



ಶ್ರೀ ಎಂ.ಎಸ್. ಮಹಾಬಲೇಶ್ವರ ಭಟ್, ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಬ್ಯಾಂಕ್ ಲಿಮಿಟೆಡ್

ಅಭಿಮತ

ಸಂಪುಟ 33 | ಸಂಚಿಕೆ 5

ಫೆಬ್ರವರಿ 2023

ಅಭಿಮತ ಸಂಪಾದಕ ಮಂಡಳ

ಪ್ರಧಾನ ಸಂಪಾದಕ
ಚಂದ್ರಶೇಖರ ಎನ್.ಪಿ.

ಸಂಪಾದಕ ಮಂಡಳ ಸದಸ್ಯರು
ಕೆ.ಎಸ್. ಮೂರ್ತಿ
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸಿ.ಎಂ. ನಾಗರಾಜ

ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್

ಕೋಶಾಧಿಕಾರಿ
ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು
ಬಿ. ನಾರಾಯಣ
ಸುಮಿತಾ ಮುರಗೋಡ

ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಚಂದ್ರಶೇಖರ ಎನ್.ಪಿ.

ಕಾವಲು ಸಮಿತಿ
ಅನಂತರಾಮ ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ

## ಸಂಪಾದಕೀಯ

# ‘ಕನ್ನಡಕ್ಕಾಗಿ ದೆಹಲಿಯ ಹಿರಿಯ ಕನ್ನಡಿಗರ ತುಡಿತ, ಮಿಡಿತ, ಸೆಳೆತ ಯುವ ಪೀಳಿಗೆಗೆ ಕನ್ನಡವನ್ನು ಉಳಿಸಿ ಬೆಳೆಸಲು ಪ್ರೇರಣೆಯಾಗಲಿ’

ಬಂಧುಗಳೇ, ಸಾವಿರಾರು ವರ್ಷಗಳ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಭವ್ಯ ಭಾರತದಲ್ಲಿ ಇಪ್ಪತ್ತನೆ ಶತಮಾನ ಒಂದು ಅವಿಸ್ಮರಣೀಯ ಕಾಲಘಟ್ಟ. ಬ್ರಿಟಿಷರ ದಬ್ಬಾಳಿಕೆಯನ್ನು ಮಹಾತ್ಮಾ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದ ಮೂಲಕ ಮೆಟ್ಟಿ ನಿಂತು ಪರಕೀಯರನ್ನು ಹಿಮ್ಮೆಟ್ಟಿಸಿ ಹೊರಗಟ್ಟಿ ಗಳಿಸಿದ ಭಾರತ ಸ್ವಾತಂತ್ರ್ಯ ಸಾಧನೆಯಿಂದಾಗಿ ರಾಜ ಮಹಾರಾಜರ ಆಳ್ವಿಕೆಗೆ ಬದಲಾಗಿ ದೇಶದ ಶ್ರೀ ಸಾಮಾನ್ಯ ಪ್ರಜೆಯೂ ಆಡಳಿತದ ಚುಕ್ಕಾಣಿಯನ್ನು ಹಿಡಿಯುವಂತಹ ಪ್ರಜಾಸತ್ತಾತ್ಮಕ ಆಳ್ವಿಕೆಯ ಆರಂಭ, ಭಾರತದಲ್ಲಿ 600 ಕ್ಕೂ ಹೆಚ್ಚಾಗಿದ್ದ ಎಲ್ಲ ಚಿಕ್ಕ ಪುಟ್ಟ ಸಂಸ್ಥಾನಗಳನ್ನು ಒಳಗೊಂಡ ಗಣರಾಜ್ಯ ರಚನೆಗೊಂಡು ಸಂವಿಧಾನಬದ್ಧ ಆಡಳಿತ ಜಾರಿಯಾದುದು ಎಲ್ಲ ಭಾರತೀಯರಿಗೂ ಹೆಮ್ಮೆ ಪಡುವಂತಹ ಕಳೆದ ಶತಮಾನದ ಆಪ್ಯಾಯಮಾನ ಘಟನೆಗಳು.

ಆ ಎಲ್ಲ ಘಟನೆಗಳ ಜೊತೆಗೆ ಸ್ವಾತಂತ್ರ್ಯ ಹೋರಾಟದ ಜೊತೆಜೊತೆಗೆ ಭಾಷಾವಾರು ರಾಜ್ಯಗಳ ರಚನೆಗಾಗಿ ಕನ್ನಡಿಗರು ಸೇರಿದಂತೆ ಇತರ ಭಾಷಿಕರು ನಡೆಸುತ್ತಿದ್ದ ಹೋರಾಟಕ್ಕೆ 1956 ರಲ್ಲಿ ಯಶಸ್ಸು ದೊರೆತು, ಮೈಸೂರು ರಾಜ್ಯ ರಚನೆ ಮಾಡಿದುದು ಭಾರತ ಮಾತೆಯ ಮಕ್ಕಳಾದ ಕನ್ನಡಿಗರಿಗೆ ಇನ್ನಷ್ಟು ಸಂತಸ ಆತ್ಮಸ್ಥೈರ್ಯವನ್ನು ಹೆಚ್ಚಿಸಿದವು.

ನಮ್ಮ ದೇಶ ಹಾಗೂ ನಾಡಿನಲ್ಲಿ ನಡೆದ ಈ ಎಲ್ಲ ಬೆಳವಣಿಗೆಗಳು ಅಷ್ಟೊತ್ತಿಗಾಗಲೇ ಅಂದರೆ ಸ್ವಾತಂತ್ರ್ಯ ಪೂರ್ವದಿಂದಲೂ ಕರ್ನಾಟಕದ ವಿವಿಧ ಪ್ರಾಂತಗಳಿಂದ ಬಂದು ಹೊರನಾಡಿನಲ್ಲಿ ಬದುಕು ಕಟ್ಟಿಕೊಂಡಿದ್ದ ಕನ್ನಡಿಗರಲ್ಲಿ ದೇಶಾಭಿಮಾನ, ಭಾಷಾಭಿಮಾನಗಳನ್ನು ನೂರ್ಮಡಿಗೊಳಿಸಿದವು. ತಮ್ಮ ಬಂಧು ಬಾಂಧವರು ಮತ್ತು ಭಾಷಿಕರಿಂದ ನೂರಾರು ಸಾವಿರಾರು ಮೈಲಿಗಳ ದೂರದಲ್ಲಿ ನೆಲೆಸಿದ್ದ ಹೊರನಾಡ ಕನ್ನಡಿಗರು ತಾವಿರುವಲ್ಲಿಯೇ ಸಣ್ಣ ಪುಟ್ಟ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಆ ಮೂಲಕ ಕನ್ನಡ ನಾಡು ನುಡಿಗಳ ಕಂಪನ್ನು ಬೀರುವ ಜೊತೆಗೆ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಇಡೀ ದೇಶದಾದ್ಯಂತ ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ಕನ್ನಡ ಹಾಗೂ ಕರ್ನಾಟಕದ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ ಅನೇಕ ಸಂಘಟನೆಗಳಲ್ಲಿ ಹಲವು ಬೇರೆ ಬೇರೆ ಕಾರಣಗಳಿಂದ ಮುಚ್ಚಿಹೋಗಿದ್ದರೆ, ಇನ್ನು ಕೆಲವು ವಿಸ್ತೃತವಾಗಿ ಬೆಳೆದು ತಮ್ಮದೇ ಛಾಪನ್ನು ಮೂಡಿಸುತ್ತಾ ಕನ್ನಡದ ಅಸ್ಮಿತೆಯನ್ನು ಗಟ್ಟಿಯಾಗಿ ಎತ್ತಿ ಹಿಡಿದಿವೆ.

ದೇಶದಾದ್ಯಂತ ಇಂದಿಗೂ ಅಸ್ತಿತ್ವದಲ್ಲಿರುವ ಎಲ್ಲ ಕನ್ನಡ ಸಂಘ ಸಂಸ್ಥೆಗಳಿಗೆ ಒಂದು ‘ಮಾದರಿ’ಯಾಗಿ ನಿಲ್ಲಬಲ್ಲ ಹೊರನಾಡ ಕನ್ನಡಿಗರ ಸಂಘಟನೆ ಎಂದರೆ ‘ದೆಹಲಿ ಕರ್ನಾಟಕ ಸಂಘ’. ರಾಷ್ಟ್ರದ ರಾಜಧಾನಿಯಲ್ಲಿ ಕಳೆದ 75 ವರ್ಷಗಳಿಂದಲೂ ಕನ್ನಡ ನಾಡಿನ ಕಲೆ, ಸಂಸ್ಕೃತಿ, ಸಾಹಿತ್ಯ ಶಿಲ್ಪಕಲೆಗಳನ್ನು ರಾಷ್ಟ್ರ ಮಟ್ಟದಲ್ಲಿ ಪ್ರಸಾರ ಹಾಗೂ ಪ್ರಚಾರ ಪಡಿಸುವ ಹಾಗೂ ಕರ್ನಾಟಕಕ್ಕೆ ಸಂಬಂಧಿಸಿದ ಪ್ರಮುಖವಾಗಿ ‘ನುಡಿ–ನೆಲ–ಜಲ’ಗಳ ವಿಷಯದಲ್ಲಿ ರಾಜ್ಯದ ಹಿತಾಸಕ್ತಿಗೆ ಪೂರಕವಾಗಿ ನಿಂತು ರಾಷ್ಟ್ರದ ಗಮನ ಸೆಳೆಯುತ್ತಾ ಬಂದಿದೆ. ತನ್ನ ಎಪ್ಪತ್ತೈದು ವರ್ಷಗಳ ಅಸ್ತಿತ್ವವನ್ನು ಅಮೃತ ಮಹೋತ್ಸವ ಆಚರಣೆ– ಹೆಸರಿನಲ್ಲಿ ವಿಶಿಷ್ಟವಾಗಿ ಆಚರಿಸಲು ನಿರ್ಧರಿಸಿ, ಅದಕ್ಕೆ ಸಂಬಂಧಿಸಿದಂತೆ ತಮ್ಮದೇ ಆದ ಪರಿಕಲ್ಪನೆಯನ್ನು ಇಟ್ಟುಕೊಂಡಿದ್ದ ಆತ್ಮೀಯ ಗೆಳೆಯ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕಾರಿ ಸಮಿತಿಯ ಜೊತೆ ಸಂಘದ–75 ವರ್ಷದ ಈ ಸಂಭ್ರಮಾಚರಣೆಯನ್ನು ಅರ್ಥಪೂರ್ಣಗೊಳಿಸಲು ತಮ್ಮದೇ ಆದ ಕನಸುಗಳನ್ನು ತೋಡಿಕೊಂಡರು. ಅದಕ್ಕೆ ಸಂಪೂರ್ಣವಾಗಿ ಸಮ್ಮತಿಸಿದ ಕಾರ್ಯಕಾರಿ ಸಮಿತಿಯು ಕರ್ನಾಟಕದ ಎಲ್ಲ ಜಿಲ್ಲೆಗಳ ಸಾಂಸ್ಕೃತಿಕ ಉತ್ಸವವನ್ನು ಆಯೋಜಿಸುವುದು, ಅಮೃತ ಮಹೋತ್ಸವದ ಸಮಾರೋಪ ಸಮಾರಂಭದ ಕೇಂದ್ರ ಬಿಂದುವಾಗಿ ಭಾರತದ ಹೆಮ್ಮೆಯ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರನ್ನು ಆಹ್ವಾನಿಸಿ, ಸುಪ್ರಸಿದ್ಧ ಕಲಾವಿದರನ್ನು ಕರೆತಂದು ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುವುದು, ಅಮೃತೋತ್ಸವದ ನೆನಪಿಗಾಗಿ ದೆಹಲಿ–ಎನ್.ಸಿ.ಆರ್.ನಲ್ಲಿ ಸಂಘದ ವಿಸ್ತರಣೆಗಾಗಿ ನಿವೇಶನ ಖರೀದಿಸುವುದು–ಆ ಎಲ್ಲ ನೆನಪುಗಳನ್ನು ದಾಖಲಿಸಲು ಸ್ಮರಣ ಸಂಚಿಕೆಯನ್ನು ಹೊರತರುವುದು, ಹಾಗೆಯೇ ಸಂಘ ನಡೆದು ಬಂದ ದಾರಿಯನ್ನು ಕುರಿತು ‘ಕಿರು ಹೊತ್ತಿಗೆ’ಯನ್ನು ತರುವುದು, ಇತ್ಯಾದಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಪ್ರಧಾನ ಕಾರ್ಯದರ್ಶಿ ಶ್ರೀ ರೇಣುಕುಮಾರ್ ಸೇರಿದಂತೆ ಎಲ್ಲರೂ ಅಧ್ಯಕ್ಷರ ಜೊತೆ ಕೈಜೋಡಿಸಿ ಶ್ರಮಿಸುತ್ತಿದ್ದಾರೆ. ದೆಹಲಿ–ಎನ್.ಸಿ.ಆರ್. ಕನ್ನಡಿಗರೆಲ್ಲರೂ ಕಾತರ ಮತ್ತು ಕುತೂಹಲದಿಂದ ಎದುರು ನೋಡುತ್ತಿರುವ ಅಮೃತ ಮಹೋತ್ಸವ ಸಮಾರಂಭ ಇದೇ ಫೆಬ್ರವರಿ 25 ಮತ್ತು 26 ರಂದು ನವದೆಹಲಿಯ ತಾಲ್ಕಟೋರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ.

ಇನ್ನು ನನಗೆ ದೆಹಲಿ ಕರ್ನಾಟಕ ಸಂಘದ ಬೆಳೆದು ಬಂದ ದಾರಿ ಕುರಿತ ಕಿರು ಹೊತ್ತಿಗೆ ಸಿದ್ಧಪಡಿಸಲು ಮತ್ತು ಅಮೃತ ಮಹೋತ್ಸವದ ಸ್ಮರಣ ಸಂಚಿಕೆ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್ ಶಶಿಕುಮಾರ್ ಅವರ ಜೊತೆ ಸಂಚಾಲಕನಾಗಿ ಸ್ಮರಣ ಸಂಚಿಕೆ ಸಿದ್ಧಪಡಿಸುವ ಜವಾಬ್ದಾರಿಯನ್ನು ನೀಡಲಾಗಿದ್ದು ಈ ನಿಟ್ಟಿನಲ್ಲಿ ಮಾಹಿತಿ ಸಂಗ್ರಹಕ್ಕಾಗಿ ಅನೇಕ ದೆಹಲಿ ಕನ್ನಡಿಗರ ಜೊತೆ ಮಾತನಾಡಿದಾಗ ಆ ಹಿರಿಯ ಜೀವಗಳು ಸಂಘದ ಬಗ್ಗೆ ಹೊಂದಿರುವ ಕಾಳಜಿ, ಕಳಕಳಿ, ಪ್ರೀತಿ ಆದರಗಳನ್ನು ಕಂಡಾಗ ನಿಜಕ್ಕೂ ಹೊರನಾಡ ಕನ್ನಡಿಗರ ಮನಸ್ಸಿನಲ್ಲಿ ಕನ್ನಡಕ್ಕಾಗಿ ಇರುವ ತುಡಿತ, ಮಿಡಿತ, ಸೆಳೆತ ನಿಜಕ್ಕೂ ಯುವ ಪೀಳಿಗೆಗೆ ಹೊರನಾಡಿನಲ್ಲಿ ಕನ್ನಡದ ಕಂಪನ್ನು ಪಸರಿಸಲು ಪ್ರೇರಣೆ ನೀಡುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.

ಬಂಧುಗಳೇ, ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲಿ ಹೊಸ ದಾಖಲೆ ಸೃಷ್ಟಿಸಲಿರುವ ಅಮೃತ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ತಾವುಗಳೆಲ್ಲರೂ ತಮ್ಮ ಬಂಧು ಮಿತ್ರರು ಹಾಗೂ ಕುಟುಂಬದ ಜೊತೆ ಆಗಮಿಸಿ ಎರಡೂ ದಿನಗಳೂ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಹೃತ್ಪೂರ್ವಕ ಮನವಿ ಮಾಡುತ್ತೇನೆ.

ಈ ವರ್ಷ ಪದ್ಮ ಪ್ರಶಸ್ತಿಗಳಿಗೆ ಭಾಜನರಾದ ಕರ್ನಾಟಕದ ಹಿರಿಯ ಮುತ್ಸದ್ದಿಗಳಾದ ಶ್ರೀ ಎಸ್.ಎಂ. ಕೃಷ್ಣ, ಶ್ರೀಮತಿ ಸುಧಾಮೂರ್ತಿ ಅವರೂ ಸೇರಿದಂತೆ ಸಾಧಕರಾದ ಡಾ. ಖಾದರ್ ವಲಿ ದುಡಿಕುಲ್ಲಾ, ರಾಣಿ ಮಾಚಯ್ಯ, ಪಿಂಡಿ ಪಾಪನಹಳ್ಳಿ ಮುನಿವೆಂಕಟಪ್ಪ, ಷಾ ರಷೀದ್ ಅಹ್ಮದ್ ಖಾದ್ರಿ, ಎಸ್. ಸುಬ್ಬರಾಮನ್ ಅವರುಗಳಿಗೂ ಅಭಿಮತ ಓದುಗರ ಪರವಾಗಿ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಎಂದಿನಂತೆ ಈ ಸಂಚಿಕೆಯಲ್ಲಿಯೂ ಸಂಘದಲ್ಲಿ ಆಯೋಜಿಸಿದ್ದ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ಸಾಂಸ್ಕೃತಿಕ ಕಾರ್ಯಕ್ರಮ, ಗಣರಾಜೋತ್ಸವ ದಿನಾಚರಣೆ ಹಾಗೂ ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳ ಚಟುವಟಿಕೆಗಳ ವರದಿಗಳನ್ನು ಹೊತ್ತ ಅಭಿಮತವನ್ನು ನಿಮ್ಮ ಕೈಗಿಡುತ್ತಿದ್ದೇವೆ. ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 33 ಸಂಚಿಕೆ 5
ಫೆಬ್ರವರಿ 2023, ಬೆಲೆ ರೂ. 1

## ಅಧ್ಯಕ್ಷರ ನುಡಿ



ಆತ್ಮೀಯ ನನ್ನ ಕನ್ನಡ ಬಂಧುಗಳಿಗೆ ಅಮೃತ ಮಹೋತ್ಸವ ವರ್ಷದ ಶುಭಾಶಯಗಳು.

ದೆಹಲಿ ಕರ್ನಾಟಕ ಸಂಘಕ್ಕೆ 75ನೇ ವರ್ಷದ ಸಂಭ್ರಮದಲ್ಲಿ ರಾಜ್ಯದ ಎಲ್ಲಾ 31 ಜಿಲ್ಲೆಗಳ ನಾನಾ ಕಲಾ ಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಯಶಸ್ವಿಯಾಗಿ ಆಯೋಜನೆ ಮಾಡಿದ್ದೇವೆ. ಈ ಕಾರ್ಯಕ್ರಮದಲ್ಲಿ ಪ್ರತಿಯೊಂದು ಜಿಲ್ಲೆಯ ಸಾಹಿತ್ಯ, ಸಂಸ್ಕೃತಿ, ಕಲೆ ಮತ್ತು ಆಹಾರ ವೈವಿಧ್ಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಹಳ್ಳಿಯಿಂದ ದೆಹಲಿಯವರಿಗೆ ಎಲ್ಲಾ ಕಲಾವಿದರಿಗೆ ವೇದಿಕೆ ಕಲ್ಪಿಸಿ ಕೊಡಬೇಕೆಂದು ಸಂಕಲ್ಪ ತೊಟ್ಟು ಮುಂದುವರಿದೆವು.

ಮೊಟ್ಟ ಮೊದಲಿಗೆ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿಗಳ ಆಶೀರ್ವಾದದೊಂದಿಗೆ ಉದ್ಘಾಟನೆಯಾದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉತ್ಸವದಿಂದ ಆರಂಭಿಸಿ ರಾಜ್ಯದ ಎಲ್ಲಾ ಜಿಲ್ಲೆಗಳ ಕಲಾವಿದರನ್ನು ಕರೆತರಿಸಿ ಪ್ರತಿಯೊಬ್ಬರಿಗೂ ಅವಕಾಶ ಮಾಡಿಕೊಡುವಲ್ಲಿ ಈ ಕಾರ್ಯ ಅಮೃತ ಮಹೋತ್ಸವ ವರ್ಷದಲ್ಲಿ ಯಶಸ್ವಿಯಾಗಿದೆ. ಪ್ರತಿ ಶನಿವಾರ ಭಾನುವಾರ ತಮ್ಮ ಮುಂದೆ ಪ್ರಸ್ತುತಪಡಿಸಿದ ಕಾರ್ಯಕ್ರಮಗಳಿಗೆ ತಾವುಗಳು ಬಂದು ಸಾಕ್ಷಿಯಾಗಿದ್ದೀರಿ. ನಾನಾ ಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಬಗೆ ಬಗೆ ರೀತಿಯ ಆಯಾ ಜಿಲ್ಲೆಗಳ ಆಹಾರ ತಮಗೆ ಉಣಬಡಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಕೊನೆಯ ಜಿಲ್ಲಾವಾರು ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದಲ್ಲಿ ಇತ್ತೀಚೆಗೆ ನಡೆದ ನಾಡಪ್ರಭು ಕೆಂಪೇಗೌಡರ ಕನಸಿನ ಅಖಂಡ ಬೆಂಗಳೂರು ಹಬ್ಬವನ್ನು ವಿಜೃಂಭಣೆಯಿಂದ ಆಯೋಜನೆ ಮಾಡಿ ಸುಮಾರು 130ಕ್ಕೂ ಹೆಚ್ಚು ಕಲಾವಿದರು ಬಂದು ಕಾರ್ಯಕ್ರಮವನ್ನು ವಿಶೇಷವಾಗಿ ನಮ್ಮ ದೆಹಲಿ ಕನ್ನಡಿಗರಿಗೆ ನೀಡುವಲ್ಲಿ ಭಾಗಿಯಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ಮೊಟ್ಟ ಮೊದಲ ಬಾರಿಗೆ ಬೆಂಗಳೂರಿನಲ್ಲಿ ನಡೆಯುವಂತಹ ಪ್ರಸಿದ್ಧ ಕರಗ ಕುಣಿತವನ್ನೂ ಸಹ ಆಯೋಜನೆ ಮಾಡಿದ್ದೇವೆ. ಕಳೆದ ಜನವರಿ 22ರ ಭಾನುವಾರ ಮಧ್ಯಾಹ್ನ ಎರಡು ಗಂಟೆಗೆ ಶುರುವಾದ ಕಾರ್ಯಕ್ರಮಗಳು ಸತತವಾಗಿ ಎಂಟು ಗಂಟೆ ನಡೆದು ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿವೆ. ಸಾವಿರಾರು ಜನ ಫೇಸ್‌ಬುಕ್ ಲೈವ್‌ನಲ್ಲಿ ಆನ್‌ಲೈನ್ ವೀಕ್ಷಣೆ ಮಾಡಿ ಕಾರ್ಯಕ್ರಮಕ್ಕೆ ಮೆಚ್ಚುಗೆ ಶುಭಾಶಯಗಳನ್ನು ಸಹಾ ಕೋರಿದ್ದಾರೆ. ಈ ಕಾರ್ಯಕ್ರಮದ ಜವಾಬ್ದಾರಿಯನ್ನು ವಹಿಸಿಕೊಂಡ ಎಲ್ಲಾ ನನ್ನ ಕಾರ್ಯಕಾರಿ ಸಮಿತಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ವಿಶೇಷವಾಗಿ ಈ ಕಾರ್ಯಕ್ರಮದ ಉಸ್ತುವಾರಿ ನೋಡಿಕೊಂಡ ನಮ್ಮ ಉಪಾಧ್ಯಕ್ಷರು ಡಾ. ಎಂ.ಎಸ್. ಶಶಿಕುಮಾರ್‌ರವರಿಗೆ ಅನಂತಾನಂತ ಕೃತಜ್ಞತೆಗಳು.

ಬಂಧುಗಳೇ, ಈ ಎಲ್ಲಾ ಜಿಲ್ಲಾವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘದಲ್ಲಿ ತಮ್ಮ ಮುಂದೆ ವಿಶೇಷವಾಗಿ ಈ ವರ್ಷದಲ್ಲಿ ಮಾಡಿದ್ದೇವೆ. ದೆಹಲಿ ಕರ್ನಾಟಕದ ಸಂಘದಿಂದ ಒಂದು ರೂಪಾಯಿಯನ್ನೂ ಸಹ ತೆಗೆದುಕೊಳ್ಳದೆ ಈ ಪೂರ್ತಿ ವರ್ಷದ ಸಾಂಸ್ಕೃತಿಕ ಕಾರ್ಯಕ್ರಮಗಳ ಖರ್ಚು ವೆಚ್ಚ 80 ಲಕ್ಷದಿಂದ ಒಂದು ಕೋಟಿ ರೂಪಾಯಿವರೆಗೆ ಆಗಿದ್ದು ಇದನ್ನ ಎಲ್ಲಾ ದಾನಿಗಳ ಸಹಕಾರ ರೂಪದಿಂದ ಪಡೆದುಕೊಂಡು ಎಲ್ಲ ಮಿತ್ರರ ಸಹಾಯದಿಂದ ನಿಮ್ಮೆಲ್ಲರ ಸಕ್ರಿಯ ಭಾಗವಹಿಸುವಿಕೆಯಿಂದ ಈ ಕಾರ್ಯಕ್ರಮಗಳನ್ನು ಸುಮಾರು ಒಂದು ಸಾವಿರದ ಇನ್ನೂರಕ್ಕೂ ಹೆಚ್ಚು ಕಲಾವಿದರನ್ನು ದೆಹಲಿಗೆ ಕರೆತರೆಸಿ ಆಯೋಜಿಸುವಲ್ಲಿ ನಮ್ಮ ಪ್ರಸ್ತುತ ಕಾರ್ಯಕಾರಿ ಸಮಿತಿ ಯಶಸ್ವಿಯಾಗಿದೆ ಎಂದು ತಿಳಿಸಲು ನನಗೆ ಬಹಳ ಸಂತೋಷವಾಗುತ್ತಿದೆ.

ಆತ್ಮೀಯರೇ, ಈ ಎಲ್ಲ ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ನಡೆದಿವೆ. ಈಗ ಮುಂದಿನ ಸರದಿ ದೆಹಲಿ ಕರ್ನಾಟಕ ಸಂಘದ ಅಮೃತ ವರ್ಷದ ಸಮಾರೋಪ ಸಮಾರಂಭ. ದೆಹಲಿಯ ಪ್ರತಿಷ್ಠಿತ ತಾಲ್ಕಟೋರ ಸಭಾಂಗಣದಲ್ಲಿ ನಡೆಯುವ ಈ ಕಾರ್ಯಕ್ರಮವನ್ನು ವಿಶ್ವದ ನಂಬರ್ ಒನ್ ನಾಯಕ, ಭಾರತದ ಮಾನ್ಯ ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿಯವರು ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದಾರೆ. ಕರ್ನಾಟಕದಿಂದ ಪರಮಪೂಜ್ಯರುಗಳು, ಮಂತ್ರಿವರ್ಯರೂ, ಸಂಸದರು, ಶಾಸಕರು, ಗಣ್ಯಾತಿ ಗಣ್ಯರು ಮತ್ತು ಸಾಹಿತಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ವಿಶೇಷವಾಗಿ ಕರ್ನಾಟಕದಿಂದ ಸುಮಾರು 1000 ಕಲಾವಿದರು ದೆಹಲಿಗೆ ಬಂದು ಈ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಲಿದ್ದು ವಿಶೇಷವಾದ ಕಾರ್ಯಕ್ರಮ ಆಕಾಡೆಮಿ ಮತ್ತು ಗ್ರ್ಯಾಮ್ಮಿ ಅವಾರ್ಡ್ ವಿಜೇತ ಹಾಡು 'ಜೈಹೋ' ಖ್ಯಾತಿ ಕನ್ನಡ ಚಿತ್ರರಂಗದ ಪ್ರಸಿದ್ಧ ಹಿನ್ನೆಲೆ ಗಾಯಕ ಶ್ರೀ ವಿಜಯ್ ಪ್ರಕಾಶ್‌ರವರ ಸಂಗೀತ ಸಂಜೆಯು ಸಹ ನಡೆಯಲಿದೆ. ವಿವಿಧ ಬಗೆಯ ಇನ್ನು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆ ಜೊತೆಗೆ ದೆಹಲಿ ಕರ್ನಾಟಕ ಸಂಘಕ್ಕೆ ಸೇವೆ ನೀಡಿದಂತಹ ಮಾಜಿ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಹಾಗು ಹಿರಿಯ ಸದಸ್ಯರಿಗೆ ನಾವೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ, ಭಾಗವಹಿಸಿ ಅಭಿನಂದಿಸೋಣ. ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಕಹಳೆ 'ಬಾರಿಸು ಕನ್ನಡ ಡಿಂಡಿಮವ' ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದರಿಂದ ತಾವುಗಳೆಲ್ಲ ಇದೇ ಫೆಬ್ರವರಿ 25 ಮತ್ತು 26, ಶನಿವಾರ ಮತ್ತು ಆದಿತ್ಯವಾರದಂದು ಎರಡೂ ದಿನಗಳು ಕುಟುಂಬ ಸಮೇತರಾಗಿ ಬಂದು ಈ ಸುಂದರವಾದ ಕಾರ್ಯಕ್ರಮವನ್ನು ಕಣ್ತುಂಬ ನೋಡಿ ಆನಂದಿಸಿ, ಯಶಸ್ವಿಗೊಳಿಸಬೇಕೆಂದು ಹಾಗು ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿ ಉಳಿಯುವಂತಹ ಒಂದು ದೊಡ್ಡ ಮಟ್ಟದ ಕಾರ್ಯಕ್ರಮಕ್ಕೆ ನೀವುಗಳು ಸಾಕ್ಷಿಯಾಗಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಹಾರ್ದಿಕ ಶುಭಾಶಯಗಳು ಮತ್ತು ಧನ್ಯವಾದಗಳೊಂದಿಗೆ

*ಸಿ.ಎಂ. ನಾಗರಾಜ*
**ಅಧ್ಯಕ್ಷರು**

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ಆತ್ಮೀಯ ಸದಸ್ಯ ಬಂಧುಗಳೇ,
ದೆಹಲಿ ಕರ್ನಾಟಕ ಸಂಘವು ಇಡೀ ರಾಷ್ಟ್ರದಲ್ಲಿ ಅತ್ಯಂತ ಕ್ರಿಯಾಶೀಲ, ಸಂಘಗಳಲ್ಲಿ ಪ್ರಮುಖವಾಗಿರುವುದು ನಮಗೆಲ್ಲಾ ಅತ್ಯಂತ ಸಂತೋಷದ ವಿಷಯ. ತನ್ನ ಹಿರಿಮೆಯ ಗರಿಗೆ ಕಳಶಪ್ರಾಯವಾಗಿ, ಸಂಘವು ತನ್ನ ಅಮೃತ ಮಹೋತ್ಸವಾಚರಣೆಯನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಿದೆ. ಇದೀಗ ಈ ಅಮೃತ ಮಹೋತ್ಸವಾಚರಣೆಯ ಕೊನೆಯ ಹಂತಕ್ಕೆ ಕಾಲಿಟ್ಟಿದ್ದು, ಸಮಾರೋಪ ಸಮಾರಂಭದ ತಯಾರಿಯಲ್ಲಿ ನಾವೆಲ್ಲರು ತೊಡಗಿದ್ದೇವೆ. ಈ ಕಾರ್ಯಕ್ರಮದ ಯಶಸ್ವಿ ಆಯೋಜನೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಈ ಕಾರ್ಯದಲ್ಲಿ ತಮ್ಮೆಲ್ಲರ ಸಹಕಾರ ಅಗತ್ಯ.

ನಮ್ಮಗಳೆಲ್ಲರ ಪ್ರಮುಖ ಹಾಗೂ ಪ್ರಪ್ರಥಮ ಜವಾಬ್ದಾರಿ, ನಾವೆಲ್ಲರೂ ಕಾರ್ಯಕ್ರಮಕ್ಕೆ ಬರುವುದು, ಪರಿಚಿತರು, ಸ್ನೇಹಿತರು, ಬಂಧು-ಬಳಗ ಎಲ್ಲರನ್ನೂ ಕರೆ ತರುವುದು. ಏಕೆಂದರೆ ಜನ ಸೇರದೇ ಜಾತ್ರೆ ಆದೀತೆ, ನಾವೆಲ್ಲರೂ ಕೂಡಿದರೆ-ಅದೇ ಹಬ್ಬ ಅದೇ ಸಂಭ್ರಮ. ನಮ್ಮಗಳ ಸಂಭ್ರಮಕ್ಕೆ ಬಣ್ಣ ಎರಚಲು ನೂರಾರು ಕಲಾವಿದರು, ಇತಿಹಾಸಕಾರರು ಹಾಗೂ ಖ್ಯಾತ ಹಿನ್ನೆಲೆ ಗಾಯಕ ಶ್ರೀ ವಿಜಯ್ ಪ್ರಕಾಶ್ ಹಾಗೂ ಸಂಗಡಿಗರು ಬರುತ್ತಿದ್ದಾರೆ. ಇವರೆಲ್ಲರ ಕಲಾ ಪ್ರದರ್ಶನದೊಂದಿಗೆ ಬನ್ನಿ ಜೊತೆ ಸೇರಿ, ಸಂಭ್ರಮಿಸೋಣ.

ನಿಮ್ಮ ಬರುವಿಗಾಗಿ ಕಾಯುತ್ತಿರುವ. . .

**ಆರ್. ರೇಣುಕುಮಾರ್**
**ಪ್ರಧಾನ ಕಾರ್ಯದರ್ಶಿ**

## ಸಂಘದ ಮುಂಬರುವ ಕಾರ್ಯಕ್ರಮಗಳು

**ದೆಹಲಿ ಕರ್ನಾಟಕ ಸಂಘದ**
**ಅಮೃತ ಮಹೋತ್ಸವ ಸಮಾರಂಭ**

ಫೆಬ್ರವರಿ 25 ಶನಿವಾರ ಮತ್ತು 26 ಭಾನುವಾರ 2023
ಸ್ಥಳ : ತಾಲ್ಕಟೋರ ಒಳಾಂಗಣ ಕ್ರೀಡಾಂಗಣ, ತಾಲ್ಕಟೋರ ಲೇನ್
ಪ್ರೆಸಿಡೆಂಟ್ಸ್ ಎಸ್ಟೇಟ್, ನವದೆಹಲಿ–110004



ಕಾರ್ಯಕ್ರಮದ ಉದ್ಘಾಟನೆ
**ಸನ್ಮಾನ್ಯ ಶ್ರೀ ನರೇಂದ್ರ ಮೋದಿ**
**ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ**

# ಬಾರಿಸು ಕನ್ನಡ ಡಿಂಡಿಮವ

**ಏಕ್ ಭಾರತ್ ಶ್ರೇಷ್ಠ್ ಭಾರತ್.... ಸಾಂಸ್ಕೃತಿಕ ಸಂಭ್ರಮ**

ಸನ್ಮಾನ್ಯ ಶ್ರೀ ಎಚ್.ಡಿ. ದೇವೇಗೌಡ
**ಮಾಜಿ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ**

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ
ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ,
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ, ಮಹಾಸಂಸ್ಥಾನ ಮಠ

ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ
ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ,
ಶ್ರೀ ಸುತ್ತೂರು ಮಠ

ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ
ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ

ಪರಮಪೂಜ್ಯ ಶ್ರೀ ಶ್ರೀ ಶ್ರೀ
ನಂಜಾವಧೂತ ಮಹಾಸ್ವಾಮೀಜಿ
ಪೀಠಾಧ್ಯಕ್ಷರು, ಶ್ರೀ ಸ್ಫಟಿಕಾಪುರಿ
ಮಹಾಸಂಸ್ಥಾನ ಮಠ

ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ
ಜಗದ್ಗುರು ಮಧ್ವಾಚಾರ್ಯ ಸಂಸ್ಥಾನ,
ಶ್ರೀ ಪೇಜಾವರ ಮಠ, ಉಡುಪಿ

ಡಾ. ಡಿ. ವೀರೇಂದ್ರ ಹೆಗ್ಗಡೆ
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ
ಮಾನ್ಯ ರಾಜ್ಯಸಭಾ ಸದಸ್ಯರು

ಶ್ರೀ ಯದುವೀರ ಕೃಷ್ಣದತ್ತ
ಚಾಮರಾಜ ಒಡೆಯರ್
ಮಹಾರಾಜರು, ಮೈಸೂರು

ಕಾರ್ಯಕ್ರಮದ ಗೌರವಾಧ್ಯಕ್ಷರು
ಸನ್ಮಾನ್ಯ ಶ್ರೀ ಸಿ.ಟಿ. ರವಿ
ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಬಿಜೆಪಿ

ಶ್ರೀ ಮುರುಗೇಶ ಆರ್. ನಿರಾಣಿ
ಮಾನ್ಯ ಬೃಹತ್ ಮತ್ತು ಮಧ್ಯಮ
ಕೈಗಾರಿಕೆ ಸಚಿವರು, ಕರ್ನಾಟಕ ಸರ್ಕಾರ

ಸನ್ಮಾನ್ಯ ಶ್ರೀ ಬಿ.ಎಲ್. ಸಂತೋಷ್
ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ

ಸನ್ಮಾನ್ಯ ಶ್ರೀ ಪ್ರಹ್ಲಾದ ಜೋಶಿ
ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆ ಸಚಿವರು

ಸನ್ಮಾನ್ಯ ಶೋಭಾ ಕರಂದ್ಲಾಜೆ
ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವರು

ಸನ್ಮಾನ್ಯ ಶ್ರೀ ಎ. ನಾರಾಯಣ ಸ್ವಾಮಿ
ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವರು

ಸನ್ಮಾನ್ಯ ಶ್ರೀ ಭಗವಂತ ಖೂಬಾ
ಕೇಂದ್ರ ಹೊಸ ನವೀಕರಿಸಬಹುದಾದ ಶಕ್ತಿ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ, ಸಚಿವರು

ಶ್ರೀ ವಿ. ಸುನಿಲ್ ಕುಮಾರ್
ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ, ಇಲಾಖೆ ಸಚಿವರು, ಕರ್ನಾಟಕ ಸರ್ಕಾರ

ಡಾ. ಅಶ್ವತ್ಥ ನಾರಾಯಣ ಸಿ.ಎನ್.
ಮಾನ್ಯ ಉನ್ನತ ಶಿಕ್ಷಣ ಐ.ಟಿ. ಮತ್ತು ಬಿ.ಟಿ.,
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಕೆ. ಗೋಪಾಲಯ್ಯ
ಮಾನ್ಯ ಅಬಕಾರಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಮಾನ್ಯ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಡಾ. ಕೆ. ಸುಧಾಕರ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ

ಶ್ರೀ ಸಿ.ಎಂ. ನಾಗರಾಜ
ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ

- ಕುಂಭ ಕಲಶ ಜಾನಪದ ಕಲಾವಿದರೊಂದಿಗೆ ಪ್ರಧಾನ ಮಂತ್ರಿಗಳಿಗೆ ಸ್ವಾಗತ
- ಮಾನ್ಯ ಪ್ರಧಾನ ಮಂತ್ರಿಗಳಿಂದ ಕಾರ್ಯಕ್ರಮದ ಉದ್ಘಾಟನೆ
- ನಾಡಿನ ಪರಮಪೂಜ್ಯರಿಂದ ಆಶೀರ್ವಚನ • ನೃತ್ಯೋತ್ಸವ • ಕರ್ನಾಟಕದ ಜಾನಪದ ಕಲಾವೈಭವ • ನಾಡಿನ ಪ್ರಸಿದ್ಧ ಕಲಾವಿದರಿಂದ ಸಂಗೀತೋತ್ಸವ
- ಕರ್ನಾಟಕದ ಪ್ರಸಿದ್ಧ ಕಲಾವಿದರಿಂದ ಹಾಸ್ಯ ಸಂಜೆ • ನಾಡಿನ ಪ್ರಸಿದ್ಧ ಕಲಾವಿದರಿಂದ ಯಕ್ಷಗಾನ • ಕರ್ನಾಟಕ ರಾಜ ಮನೆತನಗಳ ಇತಿಹಾಸ ವೈಭವ • ಹೊರನಾಡಿನ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮಿಲನ • ಖ್ಯಾತ ಕವಿಗಳಿಂದ ಕವಿಗೋಷ್ಠಿ • ದೆಹಲಿ ಕರ್ನಾಟಕ ಸಂಘಕ್ಕೆ ಸೇವೆ ಸಲ್ಲಿಸಿದ ಮಹನೀಯರಿಗೆ ಅಭಿನಂದನಾ ಕಾರ್ಯಕ್ರಮ
- ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಸಹಾಯ ನೀಡಿದ ಮಹಾನ್ ದಾನಿಗಳಿಗೆ ಸನ್ಮಾನ • ಸಮಾರೋಪ ಕಾರ್ಯಕ್ರಮ



**ಕನ್ನಡ ಚಿತ್ರರಂಗದ ಜನಪ್ರಿಯ ಹಿನ್ನೆಲೆ ಗಾಯಕ**
**ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಾಡು**
**'ಜೈಹೋ' ಖ್ಯಾತಿ**
**ಶ್ರೀ ವಿಜಯ್ ಪ್ರಕಾಶ್ ಮತ್ತು ಸಂಗಡಿಗರಿಂದ**

## ಸಂಗೀತೋತ್ಸವ

**ಆತ್ಮೀಯ ಸ್ವಾಗತ ಕೋರುವ**

ಸಿ.ಎಂ. ನಾಗರಾಜ
**ಅಧ್ಯಕ್ಷರು**

ಆರ್. ರೇಣುಕುಮಾರ್
**ಪ್ರಧಾನ ಕಾರ್ಯದರ್ಶಿ**

# ರಾಷ್ಟ್ರರಾಜಧಾನಿಯಲ್ಲಿ ಅರ್ಥಪೂರ್ಣವಾಗಿ ನೆರವೇರಿದ ನಾಡಪ್ರಭು ಕೆಂಪೇಗೌಡರ ಕನಸಿನ ಅಖಂಡ ಬೆಂಗಳೂರು ಹಬ್ಬ




ಅಪಾರ ಜನುಮನ್ನಣೆ ಪಡೆದ ದೆಹಲಿ ಕರ್ನಾಟಕ ಸಂಘವು ಸ್ಥಾಪನೆಯಾಗಿ 75 ವರ್ಷಗಳಾಗಿರುವ ನೆನಪಿಗೆ ಆಯೋಜಿಸಿರುವ ಅಮೃತ ಮಹೋತ್ಸವ ಆಚರಣೆಯ ಅಂಗವಾಗಿ ಕೊನೆಯ ಜಿಲ್ಲಾವಾರು ಕಾರ್ಯಕ್ರಮ ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಸಾಂಸ್ಕೃತಿಕ ಕಲಾ ಉತ್ಸವ ದಿನಾಂಕ 22 ಜನವರಿ 2023 ರಂದು ಅರ್ಥಪೂರ್ಣವಾಗಿ ನೆರವೇರಿತು. ಬೆಂಗಳೂರು ಮತ್ತು ರಾಮನಗರ ಭಾಗದ ಆಗಮಿಸಿದ್ದ ಅತಿಥಿಗಳು ಹಾಗೂ ಕಲಾವಿದರೊಂದಿಗೆ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಮತ್ತು ಸಭಿಕರು ಸೇರಿ 'ಹಚ್ಚೇವು ಕನ್ನಡದ ದೀಪ" ಹಾಡನ್ನು ಹಾಡುತ್ತಾ ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ನಾಡಪ್ರಭು ಕೆಂಪೇಗೌಡರ ಕನಸಿನ ಅಖಂಡ ಬೆಂಗಳೂರು ಹಬ್ಬದ ಹೆಸರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕಲಾ ತಂಡಗಳಿಂದ ಸುಗಮ ಸಂಗೀತ, ಜಾನಪದ, ಸಮೂಹ ನೃತ್ಯ, ಕರಗ ಕುಣಿತ, ಪೂಜಾ ಕುಣಿತ, ಡೊಳ್ಳು, ಸೂತ್ರ ಬೊಂಬೆಯಾಟ, ತಮಟೆ, ಸೋಮನ ಕುಣಿತ, ವೀರಗಾಸೆ, ನಂದಿ ಧ್ವಜ, ಕೆಂಪೇಗೌಡ ನೃತ್ಯ ನಾಟಕಗಳು ಇತ್ಯಾದಿ ಕಾರ್ಯಕ್ರಮಗಳು ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಕಲೆ, ಸಾಂಸ್ಕೃತಿಕ, ಜಾನಪದ ಶ್ರೀಮಂತಿಕೆಯನ್ನು ಅನಾವರಣಗೊಳಿಸಿ ದೆಹಲಿ ಕನ್ನಡಿಗರ ಮೆಚ್ಚುಗೆ ಗಳಿಸಿದರು. ಜೊತೆಗೆ ನಾಡಪ್ರಭು ಕೆಂಪೇಗೌಡರ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ ಕೂಡ ಜನರನ್ನು ಆಕರ್ಷಿಸಿತು.



ಕಾರ್ಯಕ್ರಮದ ಭಾಗವಾಗಿ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ವಿದ್ಯಾರ್ಥಿವೇತನ ವಿತರಣೆಯನ್ನು ಹಮ್ಮಿಕೊಂಡು ಅತಿ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಆರ್ಥಿಕವಾಗಿ ಅವಶ್ಯಕತೆ ಇರುವ ಕುಟುಂಬಗಳ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲಾಯಿತು.

ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಆನೇಕಲ್ ತಾಲೂಕಿನ ಸಮಾಜ ಸೇವಕರು ಮತ್ತು ರಾಜಕೀಯ ಮುಖಂಡರಾದ ಶ್ರೀ ಟಿ.ವಿ. ಬಾಬು ಅವರು ಕಾರ್ಯಕ್ರಮಕ್ಕೆ ತಮ್ಮನ್ನು ಆಹ್ವಾನಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿ ಕರ್ನಾಟಕದ ಜಾನಪದ ಕಲೆ ದೆಹಲಿಯಲ್ಲಿ ಪಸರಿಸಿದ್ದು ನಮಗೆ ಖುಷಿ ನೀಡಿದೆ. ಅಲ್ಲದೆ ಸಂಘದ ಸಭಾಂಗಣದಲ್ಲಿ ಇಷ್ಟೊಂದು ಜನ ಕನ್ನಡಿಗರು ಭಾಗವಹಿಸಿದ್ದನ್ನು ನೋಡಿ ನಾವು ಈಗ ಕರ್ನಾಟಕದಲ್ಲಿಯೇ ಇದ್ದೇವೆಂದು ಭಾಸವಾಗುತ್ತಿದೆ ಎಂದು ಹೇಳಿ ಸಂಘದ ಕಾರ್ಯಕ್ರಮಗಳಿಗೆ ಶುಭ ಹಾರೈಸಿದರು.

ಮಾಧ್ಯಮ ಮುಖಂಡರು ಮತ್ತು ಒಕ್ಕಲಿಗರ ವಾಯ್ಸ್ ಮಾಸ ಪತ್ರಿಕೆಯ ಸಂಪಾದಕರು ಆದ ಶ್ರೀ ಎಸ್. ನಾಗಭೂಷಣ ಅವರು ಮಾತನಾಡಿ ದೆಹಲಿಗೆ ಇಷ್ಟೊಂದು ಕಲಾವಿದರನ್ನು ಕರೆಯಿಸಿ, ಅವರಿಗೆ ಊಟ,ವಸತಿ ಒದಗಿಸಿ, ಕಲಾ ಪ್ರದರ್ಶನ ಮಾಡಿಸುವುದು ಬಹಳ ಕಷ್ಟದ ಕೆಲಸ, ಆದರೆ ಅಂತಹ ಕೆಲಸವನ್ನು ಮಾಡುತ್ತಿರುವ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ್ ಅವರ ಕಾರ್ಯ ಬಹಳ ಸ್ಫೂರ್ತಿದಾಯಕವಾಗಿದೆ. ವೀರಗಾಸೆ ಮತ್ತು ಕರಗ ಮುಂತಾದ ಕಲೆಗಳನ್ನು ಪ್ರಸ್ತುತ ಪಡಿಸಿದ ಕಲಾವಿದರು ಆಸ್ತಿವಂತರಲ್ಲ ಅದರೆ ಅವರಿಗೆ ಕಲೆಯೇ ಆಸ್ತಿಯಾಗಿದೆ ಅಂತಹ ಪವಿತ್ರ ಮನೋಭಾವದಿಂದ ಕಲಾವಿದರು ತಮ್ಮ ಕಲೆಯನ್ನು ಪ್ರದರ್ಶನ ಮಾಡುತ್ತಾರೆ. ಕಲಾ ಪ್ರದರ್ಶನದ ಸಂದರ್ಭದಲ್ಲಿ ಅವರ ಆಚರಣೆಗಳು ಕೂಡ ಅಷ್ಟೇ ಸಂಸ್ಕಾರಯುತವಾಗಿರುತ್ತವೆ ಎಂದು ಹೇಳಿ, ಒಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲು ಯಾವ ರೀತಿಯಾಗಿ ಶ್ರಮಿಸಬೇಕಾಗುತ್ತದೆ ಎಂದು ವಿವರಿಸಿ ಕಾರ್ಯಕ್ರಮದ ಆಯೋಜಕರಿಗೆ ಧನ್ಯವಾದಗಳನ್ನು ತಿಳಿಸಿದರು.

ಕಲಾ ಪೋಷಕರು ಮತ್ತು ಕರ್ನಾಟಕ ಜಾನಪದ ಜಾತ್ರೆಯ ನಿರ್ದೇಶಕಿಯಾಗಿರುವ ಶ್ರೀಮತಿ ಶಿವಮ್ಮ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘವು ತಂಪಾಗಿದ್ದರೆ ಅದೇ ನಮ್ಮಂತಹ ಕಲಾವಿದರಿಗೆ



ತವರು ಮನೆಯಾಗುತ್ತದೆ. ನಾವು ನಮ್ಮ ಭಾಗದಲ್ಲಿ ಕಲೆ ಪ್ರದರ್ಶನ ಮಾಡುತ್ತಾ ಜೀವನ ಸಾಗಿಸುವ ಸಂದರ್ಭದಲ್ಲಿ ನಮ್ಮನ್ನು ದೆಹಲಿಗೆ ಕರೆಸಿ, ಆದರಿಸಿ, ಊಟ ಹಾಕಿ ಪ್ರೀತಿಯಿಂದ ನೋಡಿಕೊಂಡಿದ್ದಕ್ಕೆ ತಾವು ಚಿರಋಣಿಗಳು ಎಂದರು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ್ ಅವರದು ಸದಾ ನಗುಮುಖದ ವ್ಯಕ್ತಿತ್ವ, ಸಂಘಕ್ಕೆ ಬರುವ ಎಲ್ಲ ಕಲಾವಿದರನ್ನು ಅತ್ಯಂತ ಪ್ರೀತಿ ಗೌರವಗಳೊಂದಿಗೆ ಅವರು ಮಕ್ಕಳ ಹಾಗೆ ನೋಡಿಕೊಳ್ಳುತ್ತಾರೆ ಎಂದು ಮೆಚ್ಚುಗೆ ಮಾತುಗಳನ್ನು ಆಡಿದರು

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ರಾಜ್ಯ ಜಾನಪದ ಕಲಾವಿದರ ಒಕ್ಕೂಟದ ಅಧ್ಯಕ್ಷ ಶ್ರೀ ಕೆ. ನಾಗರಾಜ್ ಅವರು ಕಲಾವಿದರು ಬಹಳ ಕಷ್ಟ ಪಟ್ಟು ದೆಹಲಿಗೆ ಬಂದಿದ್ದಕ್ಕೆ ಇವತ್ತಿನ ಕಾರ್ಯಕ್ರಮವು ಅಭೂತಪೂರ್ವ ಯಶಸ್ವಿಯಾಗಿದೆ. ದೆಹಲಿ ಕನ್ನಡಿಗರ ಸ್ಪಂದನೆ ಮತ್ತು ಅವರ ಆತಿಥ್ಯ ಯಾವತ್ತು ಮರೆಲಾಗದಿರುವಂತಹದ್ದು. ಸಂಘದ ಅಧ್ಯಕ್ಷರು ಸದಾ '100' ಎಮರ್ಜೆನ್ಸಿ ಹೆಲ್ಪ್‌ಲೈನ್ ನಂಬರ್ ಇದ್ದ ಹಾಗೆ ಯಾವ ಸಮಯದಲ್ಲಿ ಕರೆ ಮಾಡಿದರೂ ಸಹ ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆ, ಸಹಕರಿಸುತ್ತಾರೆ ಎಂದರು. ಇವತ್ತಿನ ಕಾರ್ಯಕ್ರಮಕ್ಕೆ ನಮ್ಮ ಕಲಾವಿದರು ತಮ್ಮ ಸಲಕರಣೆಗಳ ಜೊತೆಗೆ ಹೂವಿನ ಅಲಂಕಾರಗಳನ್ನು ಅದ್ಭುತವಾಗಿ ಜೋಡಿಸಿಕೊಂಡು ಬಂದು ಅಮೋಘ ಪ್ರದರ್ಶನ ನೀಡಿದ್ದಾರೆಂದು ಕಲಾವಿದರ ಕುರಿತು ಮೆಚ್ಚುಗೆ ಮಾತುಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸುಪ್ರೀಂ ಕೋರ್ಟಿನ ನ್ಯಾಯವಾದಿಗಳಾದ ಹಿರಿಯ ಕನ್ನಡಿಗ ಶ್ರೀ ಇ.ಸಿ. ವಿದ್ಯಾಸಾಗರ್ ಅವರು, ಕಲಾವಿದರಿಗೆ ಇಲ್ಲಿ ಸೇರಿರುವ ನೂರಾರು ಜನ ಕನ್ನಡಿಗರೇ ಸ್ಫೂರ್ತಿಯಾಗಿದ್ದೀರಿ. ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವ ಮಾತು ಇವತ್ತಿನ ಕಾರ್ಯಕ್ರಮದಲ್ಲಿ ಆಯೋಜಕರು ತೋರಿಸಿ ಕೊಟ್ಟಿದ್ದಾರೆ. ಜಿಲ್ಲೆ ಜಿಲ್ಲೆಗಳಿಂದ ದೆಹಲಿಗೆ ಕಲಾವಿದರನ್ನು ಕರೆಯಿಸಿ ಕಾರ್ಯಕ್ರಮ ಆಯೋಜನೆ ಮಾಡುವುದು ಬಹಳ ಕಷ್ಟ ಆದರೆ ಇದನ್ನು ಕರ್ನಾಟಕ ಸಂಘ ಬಹಳ ಸುಂದರವಾಗಿ ಮತ್ತು ಸರಳವಾಗಿ ಮಾಡಿ ತೋರಿಸುತ್ತಿದೆ ಎಂದರು ಮತ್ತು ಕಲಾವಿದರಿಗೂ ಸಹ ಸರ್ಕಾರದಲ್ಲಿ ಇತರರಿಗೆ ಇರುವಂತೆ ಒಂದು ಮೀಸಲಾತಿ ಕೋಟಾವನ್ನು ಸರ್ಕಾರಗಳು ಒದಗಿಸಬೇಕು ಮತ್ತು ಸಂಘದ ಅಧ್ಯಕ್ಷರು ಈ ಬಗ್ಗೆ ಮನವಿಯನ್ನು ಸಹ ಸಲ್ಲಿಸಬೇಕು ಎಂದು ಸಲಹೆ ನೀಡಿ ಕಾರ್ಯಕ್ರಮದ ಯಶಸ್ವಿಗೆ ಅಭಿನಂದನೆ ಸಲ್ಲಿಸಿದರು.

ವಿಶ್ವಮಾನವ ವಿದ್ಯಾಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಶ್ರೀ ಆಡಿಟರ್ ನಾಗರಾಜ್ ಯಲಚವಾಡಿ ಅವರು ಮಾತನಾಡಿ ದೆಹಲಿಯ ಬೆಂಗಳೂರಿನ ಹಬ್ಬಕ್ಕೆ ಅಭಿನಂದನೆಗಳನ್ನು ತಿಳಿಸಿ, ದೆಹಲಿಯಲ್ಲಿ ಕನ್ನಡವನ್ನು ಕಟ್ಟಿ ಬೆಳೆಸುತ್ತಿರುವುದಕ್ಕೆ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ್ ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ್ ಅವರು ಮಾತನಾಡಿ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದಂತಹ ಇಂದಿನ ಬೆಂಗಳೂರು ಮತ್ತು ರಾಮನಗರ ಜಿಲ್ಲಾ ಕಲಾ ಹಬ್ಬವೂ ಸೇರಿದಂತೆ ಎಲ್ಲ ಜಿಲ್ಲಾವಾರು ಸಾಂಸ್ಕೃತಿಕ ಕಲಾ ಉತ್ಸವಗಳು ಪೂಜ್ಯ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿಗಳ ಆಶೀರ್ವಾದದಿಂದ ಮತ್ತು ಕಲಾವಿದರ ಪರಿಶ್ರಮ, ಕಲಾ ಪ್ರೇಮಿಗಳ ಶುಭಾಶಯಗಳೊಂದಿಗೆ ಯಶಸ್ವಿಯಾಗಿವೆ. ದೆಹಲಿಯಲ್ಲಿ, ಕರ್ನಾಟಕ ಸಂಘದ ಆಶ್ರಯದಲ್ಲಿ ಕನ್ನಡ ನೆಲ, ಜಲ, ಭಾಷೆಯನ್ನು ಬೆಳೆಸಿ ಉಳಿಸುವ ಕೆಲಸಗಳು ನಿರಂತರವಾಗಿ ನಡೆಯುತ್ತಿದ್ದು, ವಿಶ್ವದಲ್ಲಿಯೇ ಅತಿ ಹೆಚ್ಚು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಮ್ಮ ಸಂಘವು ಆಯೋಜಿಸುತ್ತಾ ಬರುತ್ತಿದೆ. ಸ್ವಾಮೀಜಿಗಳ ಆಶೀರ್ವಾದದಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉತ್ಸವದ ಮೂಲಕ ಪ್ರಾರಂಭವಾದ ಅಮೃತ ಮಹೋತ್ಸವ ಕಾರ್ಯಕ್ರಮ ಇಂದು ಬೆಂಗಳೂರು ಹಬ್ಬದ ಮೂಲಕ ಸಂಪನ್ನವಾಗುತ್ತಿದೆ. ಇನ್ನು ಪೆಬ್ರವರಿ 25 ಮತ್ತು 26 ನೇ ತಾರೀಖಿನಂದು ದೆಹಲಿ ತಾಲ್ಕಟೋರಾ ಕ್ರೀಡಾಂಗಣದಲ್ಲಿ ನಡೆಯಲಿರುವ ಸಮಾರೋಪ ಕಾರ್ಯಕ್ರಮಕ್ಕೆ ಒಂದು ಸಾವಿರ ಜನ ಕಲಾವಿದರನ್ನು ಕರೆಯಿಸಿ ಕಾರ್ಯಕ್ರಮ ಮಾಡುವ ಗುರಿಯಿದೆ. ಇದಕ್ಕೆ ಖ್ಯಾತ ಕನ್ನಡ ಸಿನಿತಾರೆಯರು ಸಹ ಸಾಕ್ಷಿಯಾಗಲಿದ್ದಾರೆ. ಸಂಘವು ವರ್ಷವಿಡೀ ವಿವಿಧ ಜಿಲ್ಲೆಗಳಿಂದ ಕಲಾವಿದರನ್ನು ಕರೆಸಿ ಕಾರ್ಯಕ್ರಮ ಆಯೋಜಿಸಿರುವುದು ಇಂದು ಒಂದು ಹಂತಕ್ಕೆ ಬಂದು ನಿಂತಿದೆ. ದೆಹಲಿ ಕರ್ನಾಟಕ ಸಂಘಕ್ಕೆ ಎಲ್ಲ ಪಕ್ಷದವರು ಸಹ ಸಹಕಾರ ನೀಡಿದ್ದಾರೆ. ಸಂಘವು ಇವತ್ತು ಇಷ್ಟೊಂದು ಸಮೃದ್ಧಿಯಾಗಿರಲು ಸಂಘಕ್ಕೆ ದುಡಿದಂತ ಕರ್ನಾಟಕದ ಮೊಟ್ಟ ಮೊದಲ ಮುಖ್ಯಮಂತ್ರಿಗಳಾದ ಶ್ರೀ ಕೆ.ಸಿ. ರೆಡ್ಡಿ ಮತ್ತು ಇತರ ಪ್ರಮುಖ ನಾಯಕರುಗಳಾದ ಶ್ರೀ ಕೃಷ್ಣಮೂರ್ತಿ ರಾವ್, ಡಾ. ಸರೋಜಿನಿ ಮಹಿಷಿ, ಶ್ರೀ ಕೆ.ಆರ್. ನಾಗರಾಜ್ ಮತ್ತು ಶ್ರೀ ಜಿ.ವೈ. ಕೃಷ್ಣನ್ ಹಿಂದಿನ ಎಲ್ಲಾ ಅಧ್ಯಕ್ಷರು, ಕಾರ್ಯದರ್ಶಿಗಳು, ಸಮಿತಿಯವರು ಮುಂತಾದವರ ಕೊಡುಗೆಗಳನ್ನು ಈ ಸಂದರ್ಭದಲ್ಲಿ ನೆನೆಯಲೇಬೇಕು, ಡಾ ನಿರ್ಮಲಾನಂದನಾಥ ಸ್ವಾಮೀಜಿಗಳ ಆಶೀರ್ವಾದಿಂದ ಪಕ್ಕದ ನೋಯ್ಡಾದಲ್ಲಿ ಎರಡು ಎಕರೆ ಜಮೀನನ್ನು ಖರೀದಿಸಲು ಸ್ವಾಮೀಜಿಯವರ ನೇತೃತ್ವದ ಆಯೋಗವು ಉತ್ತರ ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥ್ ಅವರಿಗೆ ಈಗಾಗಲೇ ಮನವಿ ಮಾಡಿಕೊಂಡಿದೆ. ಅದರ ಪ್ರಕ್ರಿಯೆ ಈಗ ಜಾರಿಯಲ್ಲಿದೆ. ಇದೆಲ್ಲವು ಕನ್ನಡಿಗರ ಆಸ್ತಿಯಾಗಿದ್ದು, ಸಂಘಕ್ಕೆ ಬಂದು ಕಲಾ ಪ್ರದರ್ಶನ ನೀಡುವ ಎಲ್ಲ ಕಲಾವಿದರಿಗೆ ಉತ್ತಮ ಸಂಭಾವನೆ ಸಿಗಬೇಕು, ದೆಹಲಿಗೆ ಓದಲು ಬರುವ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ ಸೌಲಭ್ಯಗಳು ಸಿಗುವಂತೆ ಮಾಡಿಕೊಡುವ ಉದ್ದೇಶ ಸಂಘದ ಮುಂದಿವೆ ಎಂದು ಅಧ್ಯಕ್ಷರಾಗಿ ತಾವು ಇಟ್ಟುಕೊಂಡಿರುವ ಹಲವಾರು ಯೋಜನೆಗಳ ಬಗ್ಗೆ ಉಲ್ಲೇಖಿಸಿ, ಇವುಗಳು ಯಶಸ್ವಿಯಾಗಲು ಎಲ್ಲ ಕನ್ನಡಿಗರು ಸಹಕರಿಸಬೇಕೆಂದು ಮನವಿ ಮಾಡಿಕೊಂಡರು.

ಬೆಂಗಳೂರು ಮತ್ತು ಕೋಲಾರದ ಭಾಗದಲ್ಲಿ ತಮ್ಮ ವಿಭಿನ್ನ ಕಲಾ ಪ್ರದರ್ಶನಗಳಿಂದ ಹೆಸರುವಾಸಿಯಾಗಿರುವ ಅಂತರರಾಷ್ಟ್ರೀಯ ಖ್ಯಾತಿ ಶ್ರೀ ವಿದ್ವಾನ್ ಕೋಲಾರ್ ರಮೇಶ್ ಅವರು ಸಾಂಸ್ಕೃತಿಕ ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿ, ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ್ ಅವರಂತಹ ಕಲಾ ಪೋಷಕರಿಂದ, ನಾಯಕರುಗಳಿಂದ ಕನ್ನಡದ ಕಲಾವಿದರು ಇಷ್ಟೊಂದು ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿದ್ದಾರೆ ಎಂದು ತಮ್ಮ ಸೊಗಸಾದ ಮಾತುಗಳಿಂದ ನೆರದಿದ್ದ ಕನ್ನಡಿಗರಿಗೆ ಕಾರ್ಯಕ್ರಮದ ಮನರಂಜನೆಯನ್ನು ಉಣಬಡಿಸಿದರು.

ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಿ ಸತತವಾಗಿ ಸುಮಾರು ಎಂಟು ಗಂಟೆಗಳ ಕಾಲ ಮೂಡಿ ಬಂದ ಕಾರ್ಯಕ್ರಮವು ತುಂಬಿದ ಸಭಾಂಗಣದಲ್ಲಿ ದೆಹಲಿ ಕನ್ನಡಿಗರಿಗೆ ಕಲಾ ಮನರಂಜನೆಯ ಮುದ ನೀಡಿತು. ಬೆಂಗಳೂರಿನ ಕಲಾವಿದರಿಂದ ವಿಶೇಷ ಕರಗ ಪ್ರದರ್ಶನ, ಕೆಂಪೇಗೌಡರ ಕುರಿತ ನೃತ್ಯಗಳು, ಸೂತ್ರ ಬೊಂಬೆ ಪ್ರದರ್ಶನ ಹಾಗೂ ಇತರ ಕಲಾ ಪ್ರಕಾರಗಳಿಂದ ಕೂಡಿದ ಜಾನಪದ ಜಾತ್ರೆ ಎಲ್ಲರ ಮನಸೂರೆ ಗೊಂಡಿತು. ಇದೇ ಸಂದರ್ಭದಲ್ಲಿ ಪೇಸ್‌ಬುಕ್ ವೇದಿಕೆಯ ಮೂಲಕ ಕಾರ್ಯಕ್ರಮದ ನೇರ ಪ್ರಸ್ರಾರದಲ್ಲಿಯೂ ಸಹ ದೇಶದ ಮತ್ತು ನಾಡಿನ ನಾನಾ ಭಾಗಗಳಿಂದ ಸಾವಿರಕ್ಕೂ ಹೆಚ್ಚು ಜನರು ಆನ್‌ಲೈನ್ ಮೂಲಕ ಕಾರ್ಯಕ್ರಮವನ್ನು ವೀಕ್ಷಿಸಿ ಸಂತಸ ಪಟ್ಟಿದ್ದಾರೆ.

ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಆಗಮಿಸಿದ ಅತಿಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸಂತೋಷ ಜೆ ಮತ್ತು ಉಪಾಧ್ಯಕ್ಷೆಯಾದ ಶ್ರೀಮತಿ ಪೂಜಾರಾವ್ ಅವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು. ಸಮಿತಿ ಸದಸ್ಯೆ ಶ್ರೀಮತಿ ಸವಿತಾ ನೆಲ್ಲಿಯವರು ಕಾರ್ಯಕ್ರಮದಲ್ಲಿ 2023ನೇ ಸಾಲಿನ ಸಂಘದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಜಂಟಿ ಕಾರ್ಯದರ್ಶಿಯಾದ ಶ್ರೀಮತಿ ಸುಮಿತಾ ಮುರಗೋಡ ಅವರು ವಿದ್ಯಾರ್ಥಿವೇತನ ಪ್ರದಾನ ಕಾರ್ಯಕ್ರಮವನ್ನು ನಿರೂಪಿಸಿದರು, ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ರಾಜ್ಯೋತ್ಸವ ಸಂಧರ್ಭದಲ್ಲಿ ಜಾನಪದ ನೃತ್ಯ ವೈಭವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸ್ಥಳೀಯ ಕಲಾವಿದರಿಗೆ ಗೌರವ ಧನದ ಚೆಕ್ ವಿತರಣೆ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಅತಿಥಿಗಣ್ಯರನ್ನು ವೇದಿಕೆ ಮೇಲೆ ಸಂಘದ ಪರವಾಗಿ ಗೌರವಿಸಿ ಸನ್ಮಾನಿಸಲಾಯಿತು. ಜಂಟಿ ಕಾರ್ಯದರ್ಶಿಯಾದ ಬಿ. ನಾರಾಯಣ ಅವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ಸಭಾ ಕಾರ್ಯಕ್ರಮದ ನಂತರ ಕೆಂಪೇಗೌಡರ ಜೀವನ ಕುರಿತು ಬೆಂಗಳೂರಿನ ವಿಶ್ವಮಾನವ ವಿದ್ಯಾಸಂಸ್ಥೆಯ ಕಲಾವಿದರು ನೃತ್ಯರೂಪಕ ನಾಟಕ ಪ್ರದರ್ಶನ ಮಾಡಿದರು. ಪ್ರದರ್ಶನ ನೀಡಿದ ಎಲ್ಲಾ ತಂಡಗಳ ಕಲಾವಿದರನ್ನು ಮತ್ತು ಮುಖ್ಯಸ್ಥರನ್ನು ಅಭಿನಂದಿಸಿ ಗೌರವಿಸಲಾಯಿತು. ನಂತರ ಬೆಂಗಳೂರು ಶೈಲಿಯ ಸವಿರುಚಿ ಭೋಜನವನ್ನು ಆಗಮಿಸಿದ್ದ ಎಲ್ಲ ದೆಹಲಿ, ಎನ್‌ಸಿಆರ್ ಕನ್ನಡಿಗರು ಮತ್ತು ಕಲಾವಿದರು ಸವಿದು ಸಂತಸ ಪಟ್ಟರು. ಇದರೊಂದಿಗೆ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಯೋಜನೆ ಮಾಡಲಾದ ಜಿಲ್ಲಾವಾರು ಕಲಾ ಉತ್ಸವಗಳ ಕಾರ್ಯಕ್ರಮಗಳು ಸಂಪನ್ನವಾದವು.

***ಅಭಿಮತ ವರದಿ***



# ದೆಹಲಿ ಕರ್ನಾಟಕ ಸಂಘದಲ್ಲಿ ಬಹಳ ಸಡಗರ ಸಂಭ್ರಮದ
# 74 ನೇ ಗಣರಾಜ್ಯೋತ್ಸವ ಆಚರಣೆ



ಕರ್ನಾಟಕ ಸಂಘದ ಆವರಣದಲ್ಲಿ 74 ನೇಯ ಗಣರಾಜ್ಯೋತ್ಸವ ಆಚರಣೆಯನ್ನು ಹಮ್ಮಿಕೊಂಡಿದ್ದು ಜನವರಿ 26ರಂದು ಬೆಳಿಗ್ಗೆ 9 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಧ್ವಜಾರೋಹಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂಘಕ್ಕೆ ಆಗಮಿಸಿದ ಗಣ್ಯರು, ಪದಾಧಿಕಾರಿಗಳು, ಸದಸ್ಯರು, ದೆಹಲಿ ಕನ್ನಡಿಗರು ಮಹಿಳೆಯರು ಹಾಗು ಪುಟಾಣಿ ಮಕ್ಕಳು, ಉಳಿದ ಎಲ್ಲ ಕನ್ನಡ ಬಾಂಧವರು ಸೇರಿ ಸಾಮೂಹಿಕವಾಗಿ ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವ ವಂದನೆ ಸಲ್ಲಿಸಿದರು.

ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರು ಭಾರತ ಸ್ವಾತಂತ್ರ್ಯ ಮತ್ತು ಸಂವಿಧಾನವು ಜಾರಿಗೆ ಬರಲು ದುಡಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ದೇಶಭಕ್ತರ ಹೋರಾಟ, ತ್ಯಾಗ, ಬಲಿದಾನಗಳನ್ನು ನೆನಸಿಕೊಂಡು, ಸಂಘದ ಅಮೃತ ಮಹೋತ್ಸವ, 75ನೇ ಸ್ವಾತಂತ್ರೋತ್ಸವದ ಶುಭ ಸಂದರ್ಭದಲ್ಲಿ ಗಣರಾಜ್ಯೋತ್ಸವ ದಿನಾಚರಣೆ ಆಚರಿಸುತ್ತಿರುವುದು ನಮ್ಮ ಕನ್ನಡಿಗರ ಭಾಗ್ಯವಾಗಿದೆ ಎಂದು ತಿಳಿಸಿದರು. ಅಲ್ಲದೆ ಕನ್ನಡ ನಾಡಿನ ನೆಲ ಜಲ ಸಂಸ್ಕೃತಿ ಉಳಿಸಲು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿರುವ ನಮ್ಮ ಕನ್ನಡಿಗರು ಪ್ರತಿ ವರ್ಷ ಕೇಂದ್ರ ಸರ್ಕಾರದಿಂದ ಕೊಡಮಾಡುವ ಗೌರವ ಪುರಸ್ಕಾರಕ್ಕೆ ಆಯ್ಕೆಯಾಗುತ್ತಲೇ ಬಂದಿದ್ದಾರೆ. ಇಂದು ಕೂಡಾ ಕಲೆ, ಸಾಹಿತ್ಯ, ಸಾಮಾಜಿಕ ನಾಗರೀಕ ಸೇವೆ ಹಾಗು ವಿವಿಧ ಭಾಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮಹನಿಯರಿಗೆ ಭಾರತ ಸರ್ಕಾರ ಪ್ರತಿವರ್ಷ ನೀಡುವ ಉನ್ನತ ನಾಗರೀಕ ಪ್ರಶಸ್ತಿಗಳಾದ ಪದ್ಮ ವಿಭೂಷಣ, ಪದ್ಮ ಭೂಷಣ, ಹಾಗು ಪದ್ಮ ಪ್ರಶಸ್ತಿಗಳನ್ನು ರಾಜ್ಯದ ಎಂಟು ಗಣ್ಯರನ್ನು ಗುರುತಿಸಿ ನೀಡುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು.

ಅದರಲ್ಲಿ ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾದ ಕನ್ನಡಿಗರಾದ ನಮ್ಮ ನಿಮ್ಮೆಲ್ಲರ ಅಚ್ಚುಮೆಚ್ಚಿನ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣ, ಪದ್ಮಭೂಷಣ ಪ್ರಶಸ್ತಿ ಪಡೆದ ಕನ್ನಡಿಗರಾದ ಸಾಹಿತಿ ಹಾಗು ಬರಹಗಾರರಾದ ಶ್ರೀ ಎಸ್.ಎಲ್. ಭೈರಪ್ಪ ಮತ್ತು ಉದ್ಯಮಿ, ಖ್ಯಾತ ಲೇಖಕಿ ಮತ್ತು ಸಾಮಾಜಿಕ ಚಿಂತಕಿ ಶ್ರೀಮತಿ ಸುಧಾಮೂರ್ತಿ, ಪದ್ಮಶ್ರೀ ಪ್ರಶಸ್ತಿ ಪಡೆದ ಇತರೆ ಪ್ರಮುಖರಾದ ನಾಡೋಜ ಪಾಪನಹಳ್ಳಿ ಮುನಿವೆಂಕಟಪ್ಪ, ಡಾ. ಖಾದರ್ ವಲಿ, ಶ್ರೀಮತಿ ರಾಣಿ ಮಾಚಯ್ಯ, ಶ್ರೀ ಶಾ ರಶೀದ್ ಅಹ್ಮದ್ ಖಾದ್ರಿ ಮತ್ತು ಶ್ರೀ ಎಸ್ ಸುಬ್ಬರಾಮನ್ ಈ ಮುಂತಾದ ಮಹನಿಯರು ನಮ್ಮ ನಾಡಿನ ಸಂಪತ್ತು ಎಂದು ಬಣ್ಣಿಸಿದರು. ಕನ್ನಡಮ್ಮನ ಕೀರ್ತಿಗೆ ಪಾತ್ರರಾದ ಎಲ್ಲಾ ಹಿರಿಯರನ್ನು ಸಂಘಕ್ಕೆ ಮುಂದಿನ ದಿನಗಳಲ್ಲಿ ಆಹ್ವಾನಿಸಿ ದೆಹಲಿ ಕನ್ನಡಿಗರ ಪರವಾಗಿ ಅಭಿನಂದಿಸಲಾಗುವುದು ಎಂದು ತಮ್ಮ ಮನದಾಳದ ಮಾತುಗಳನ್ನು ವ್ಯಕ್ತಪಡಿಸಿದರು.

ಜೊತೆಗೆ ದೇಶದ ಹೆಮ್ಮೆಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಸಾಕ್ಷಿಯಾಗಲಿರುವ ಅಮೃತ ಮಹೋತ್ಸವದ ಸಮಾರೋಪ ಸಮಾರಂಭದ ಕಾರ್ಯಕ್ರಮವು ದೆಹಲಿಯ ತಾಲ್ಕಟೋರ ಸ್ಟೇಡಿಯಂನಲ್ಲಿ ಬರುವ ಫೆಬ್ರವರಿ 25, 26 ರಂದು ನಡೆಯಲಿದ್ದು ಈ ಕಾರ್ಯಕ್ರಮದ ಯಶಸ್ವಿಗೆ ಎಲ್ಲ ದೆಹಲಿ ಕನ್ನಡಿಗರು ಅತಿ ಹೆಚ್ಚು ಸಂಖ್ಯೆಯಲ್ಲಿ ಹುಮ್ಮಸ್ಸಿನಿಂದ ಪಾಲ್ಗೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಈ ಗಣರಾಜ್ಯೋತ್ಸವ ಆಚರಣೆಯಲ್ಲಿ ಪಾಲ್ಗೊಂಡ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸಿದರು.

ಧ್ವಜಾರೋಹಣ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ ನವದೆಹಲಿಯ ಕಾರ್ಯದರ್ಶಿಗಳಾದ ವಿ.ವಿ. ಬಿರಾದಾರ ಅವರು ಸ್ವಾತಂತ್ರೋತ್ಸವ ಪೂರ್ವದಲ್ಲಿ ನಮ್ಮ ದೇಶದಲ್ಲಿ ಅನ್ಯಾಯ, ಅತ್ಯಾಚಾರ ಅಧರ್ಮ ಅಸಮಾನತೆಯಿಂದ ಮಾನವ ಕುಲ ಅಸ್ತ ವ್ಯಸ್ತವಾಗಿತ್ತು. ಇದನ್ನರಿತ ಅನೇಕ ವೀರ ವಿರಾಂಗನೆಯವರಾದ ಮಹಾತ್ಮ ಗಾಂಧಿ, ಲಾಲ್‌ಬಹಾದ್ದೂರ್ ಶಾಸ್ತ್ರಿ, ಸರ್ದಾರ್ ವಲ್ಲಭಭಾಯ್ ಪಟೇಲ್, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಸುಭಾಷ್ ಚಂದ್ರ ಬೋಸ್, ಭಗತ್‌ಸಿಂಗ್, ರಾಜಗುರು ಮುಂತಾದವರು ಬ್ರಿಟಿಷರ ವಿರುದ್ಧ ಹೋರಾಡಿ ತಮ್ಮ ಜೀವವನ್ನು ಬಲಿದಾನ ನೀಡಬೇಕಾಯಿತು. ಅದರ ಫಲವಾಗಿ ದೇಶ ಸ್ವಾತಂತ್ರ್ಯವಾಯಿತು. ನಾವು ಇಂದು ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಭಾರತವನ್ನು ಧರ್ಮ ನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯ ಮಾಡಿಕೊಂಡು ಸುಖವಾಗಿ ಬಾಳುತ್ತಲಿದ್ದೇವೆ. ಸಂವಿಧಾನ ಮತ್ತು ಸ್ವಾತಂತ್ರ್ಯಗಳ ಅರಿವು ನಮಗಿರಬೇಕು, ಅವುಗಳ ಮೌಲ್ಯಗಳೊಂದಿಗೆ ಸಮಾಜಮುಖಿ ಕೆಲಸಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡುತ್ತಾ ಎಲ್ಲರಿಗೂ ಶುಭಹಾರೈಸಿದರು.

ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ವಿಶ್ವ ಮಾನವ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಶ್ರೀ ಆಡಿಟರ್ ನಾಗರಾಜ್ ಯಲಚವಾಡಿ ಅವರು ಮಾತನಾಡಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸಂಘದಲ್ಲಿ ನಡೆದ ಬೆಂಗಳೂರು ಕಲಾ ಉತ್ಸವ ಸಂದರ್ಭದಲ್ಲಿ ತಮ್ಮ ವಿಶ್ವಮಾನವ ವಿದ್ಯಾ ಸಂಸ್ಥೆಯ ಕಲಾತಂಡಕ್ಕೆ ಯಾವ ತರಹದ ತೊಂದರೆಯಾಗದಂತೆ ನೋಡಿಕೊಂಡರು, ಇಂದು ಗಣರಾಜ್ಯೋತ್ಸವ ಸಮಾರಂಭ ಏರ್ಪಡಿಸಿ ತಮಗೆ ಮಾತಾಡಲು ಅವಕಾಶ ನೀಡಿದ ಶ್ರೀಯುತರಿಗೆ ಅಭಿನಂದನೆಗಳು. ನಮ್ಮ ಭಾರತ ಮಾತೆಯ ಮಡಿಲಲ್ಲಿ ಬೆಳೆದು, ದೇಶದ ಸ್ವಾತಂತ್ರಕ್ಕೋಸ್ಕರ ಬಲಿದಾನ ನೀಡಿದ ಎಲ್ಲಾ ಮಹನಿಯರನ್ನು ಸ್ಮರಿಸಿ ಪೂಜ್ಯ ಭಾವನೆಯಿಂದ ನೋಡಬೇಕು. ಅವರು ನೀಡಿದ ಮಾರ್ಗದರ್ಶನದಂತೆ ನಡೆದು ಪರಸ್ಪರ ಪ್ರೀತಿ ವಿಶ್ವಾಸ ಭಕ್ತಿಯಿಂದ ಬಾಳೋಣ, ವಿಶೇಷವಾಗಿ ಶ್ರೀ ನಾಗರಾಜ ರವರು ನಮ್ಮ ಎಲ್ಲಾ ಕಲಾತಂಡಗಳನ್ನು ದೆಹಲಿಗೆ ಕರೆಯಿಸಿ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿದ ಕ್ಷಣಗಳನ್ನು ಮರೆಯುವುದಿಲ್ಲ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಖಜಾಂಚಿಗಳಾದ ಶ್ರೀ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿಗಳಾದ ಶ್ರೀ ಬಿ. ನಾರಾಯಣ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಶಿವಪ್ಪ. ಎಂ, ಶ್ರೀ ಕೆ.ಎಸ್. ಮೂರ್ತಿ, ಶ್ರೀ ಸಂತೋಷ ಜೆ, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀ ಎನ್.ಪಿ. ಚಂದ್ರಶೇಖರ ಹಾಗೂ ದೆಹಲಿಯ ಹಿರಿಯ ಕನ್ನಡಿಗರಾದ ಶ್ರೀ ವಿ.ವಿ. ಬಿರಾದಾರ, ಶ್ರೀ ನರಸಿಂಹ ಮೂರ್ತಿ, ಶ್ರೀ ರಾಘವೇಂದ್ರ, ಸದಸ್ಯರ ಕುಟುಂಬದವರು, ಸಂಘದ ವ್ಯವಸ್ಥಾಪಕ ಸಿಬ್ಬಂದಿ ಮತ್ತಿತರರು ಉಪಸ್ಥಿತರಿದ್ದರು.

**ವಿ.ವಿ. ಬಿರಾದಾರ**
ಕಾರ್ಯದರ್ಶಿ ಸಾಮಾಜಿಕ ಸುಧಾರಣಾ
ಪ್ರಗತಿಶೀಲ ಸಂಸ್ಥೆ, ನವದೆಹಲಿ

# ನವದೆಹಲಿಯ ಕರ್ತವ್ಯ ಪಥದಲ್ಲಿ ಗಣರಾಜ್ಯೋತ್ಸವದಂದು

## ಕರ್ನಾಟಕದ ಹಿರಿಮೆ ಮತ್ತು ಅಸ್ಮಿತೆಯನ್ನು ಎತ್ತಿಹಿಡಿದ "ನಾರಿ ಶಕ್ತಿ" ಸ್ತಬ್ಧಚಿತ್ರ




ಜನವರಿ 26 ರಂದು ಗಣರಾಜ್ಯೋತ್ಸವದ ಅಂಗವಾಗಿ ದೇಶದಾದ್ಯಂತ ಆಯ್ದ ಸ್ತಬ್ಧ ಚಿತ್ರಗಳನ್ನು ನವದೆಹಲಿಯ ಕರ್ತವ್ಯ ಪಥದಲ್ಲಿ (ರಾಜ್‌ಪಥ್) ನಡೆಯುವ ಪಥ ಸಂಚಲನದಲ್ಲಿ ಪ್ರದರ್ಶಿಸಿ ಭಾರತ ಗಣರಾಜ್ಯದ ಶಕ್ತಿ ಸಾಮರ್ಥ್ಯಗಳನ್ನು ಜಗತ್ತಿಗೆ ಪರಿಚಯಿಸುವ ಒಂದು ವಿಶೇಷ ಸಂದರ್ಭ. ಕೇಂದ್ರದ ಮಾರ್ಗ ಸೂಚಿಯನ್ವಯ ಎಲ್ಲ ರಾಜ್ಯಗಳಿಗೂ ಆಯ್ಕೆ ಮೇರೆಗೆ ಅವಕಾಶ ಒದಗಿಬರುತ್ತದೆ. ವಿಶೇಷವೆಂದರೆ ಕಳೆದ 13 ವರ್ಷಗಳಿಂದ ಸತತವಾಗಿ ಗಣರಾಜ್ಯ ಪಥ ಸಂಚಲನದಲ್ಲಿ ಪಾಲ್ಗೊಂಡಿರುವ ದೇಶದ ಏಕೈಕ ರಾಜ್ಯ ನಮ್ಮ ಕರ್ನಾಟಕಕ್ಕೆ ಈ ವರ್ಷ ಕೊನೆಯ ಕ್ಷಣದಲ್ಲಿ ಅವಕಾಶ ದೊರಕಿಸಿಕೊಂಡು 14 ವರ್ಷಗಳನ್ನು ಪೂರೈಸಿರುವುದು ಹೆಮ್ಮೆಯ ಸಂಗತಿ. ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ರೂಪಿಸಿದ್ದ ನಾರಿ ಶಕ್ತಿ ಸ್ತಬ್ಧಚಿತ್ರವು ಕರ್ನಾಟಕದ ಮಹಿಳೆಯರ ಶೌರ್ಯ, ಕರ್ನಾಟಕದ ಹೆಮ್ಮೆಯ ರೇಷ್ಮೆ, ಪುಷ್ಪೋದ್ಯಮ, ಸಿರಿಧಾನ್ಯದ ನಾಯಕತ್ವ, ಎಂಬ ಐದು ವಿಷಯಗಳನ್ನು ಅಡಕಗೊಂಡಿದೆ. ಜೊತೆಗೆ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಕರ್ನಾಟಕಕ್ಕೆ ಕೀರ್ತಿ ತಂದ ಮೂವರು ಮಹಿಳಾ ಸಾಧಕಿಯರಾದ ಪದ್ಮಶ್ರೀ ಪುರಸ್ಕೃತರಾದ ಸೂಲಗಿತ್ತಿ ನರಸಮ್ಮ, ವೃಕ್ಷ ಮಾತೆಯರಾದ ತುಳಸಿ ಗೌಡ ಹಾಲಕ್ಕಿ ಮತ್ತು ಸಾಲುಮರದ ತಿಮ್ಮಕ್ಕ ಅವರ ಬದುಕಿನ ಯಶೋಗಾಥೆಯನ್ನು ಬಿಂಬಿಸುವ ಆಕರ್ಷಣೀಯ ಪ್ರತಿಕೃತಿಗಳನ್ನು ನಿರ್ಮಿಸಿ ಕರ್ನಾಟಕದ ಹಿರಿಮೆ ಮತ್ತು ಅಸ್ಮಿತೆಗಳನ್ನು ರಾಷ್ಟ್ರಮಟ್ಟದಲ್ಲಿ ಪ್ರದರ್ಶಿಸಿದ್ದು ಕರ್ನಾಟಕ ಪಾಲಿಗೆ ಸ್ಮರಣೀಯವಾಗಿದೆ.

ಅಂತರರಾಷ್ಟ್ರೀಯ ಖ್ಯಾತಿಯ ಕಲಾನಿರ್ದೇಶಕ ಶಶಿಧರ ಅಡಪ ಅವರು ವಿನ್ಯಾಸ ಮಾಡಿಕೊಟ್ಟ ಸ್ತಬ್ಧಚಿತ್ರ ಕರ್ನಾಟಕದ ಬಗೆಗಿನ ಅಭಿಮಾನ, ನಾಡಿನ ಹಿರಿಮೆ ಹಾಗೂ ಸಂಸ್ಕೃತಿಯ ಮಹತ್ವವನ್ನು ಎತ್ತಿಹಿಡಿಯುವಲ್ಲಿ ಯಶಸ್ವಿಯಾಗಿದ್ದು ಇದಕ್ಕೆ ಯುವ ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಅವರ ಕನ್ನಡ ಸಂಗೀತವನ್ನು ಅಳವಡಿಸಲಾಗಿದೆ. ಕಾರವಾರದ ಪುರುಷೋತ್ತಮ ಪಾಂಡುರಂಗ ಅವರ ನೇತೃತ್ವದ ಹಾಲಕ್ಕಿಯವರ ಸುಗ್ಗಿ ಕುಣಿತದ 20 ಮಂದಿಯ ಕಲಾವಿದರ ತಂಡವು ಪಥಸಂಚಲನದಲ್ಲಿ ತೊಡಗಿಸಿಕೊಂಡಿದ್ದು ವಿಶೇಷವಾಗಿತ್ತು.

ಸ್ತಬ್ಧಚಿತ್ರದ ಮತ್ತೊಂದು ಆಕರ್ಷಣೆ ಏಳು ದಶಕಗಳಲ್ಲಿ ಇಂತಹ ಎರಡು ಸಾವಿರಕ್ಕೂ ಹೆಚ್ಚು ಹೆರಿಗೆಗಳನ್ನು ನುರಿತ ವೈದ್ಯರ ಅನುಪಸ್ಥಿತಿಯಲ್ಲಿ ಸಾಂಪ್ರದಾಯಿಕವಾಗಿ ಮಾಡಿಸುವಲ್ಲಿ ಸಿದ್ಧಹಸ್ತರಾದ ಸೂಲಗಿತ್ತಿ ನರಸಮ್ಮ ಅವರನ್ನು ಗಿಡ-ಮರ, ಬೆಟ್ಟ-ಗುಡ್ಡ, ಪಕ್ಷಿಗಳಿಂದ ಕಂಗೊಳಿಸುತ್ತಿರುವ ಸ್ತಬ್ಧಚಿತ್ರದ ಮುಂಭಾಗದಲ್ಲಿ ತೊಟ್ಟಿಲು ತೂಗುತ್ತಾ, ಕೈನಲ್ಲಿ ಮಗು ಆಡಿಸುತ್ತಿರುವಂತೆ ಚಿತ್ರಿಸಿರುವುದು.

ಅಂತೆಯೇ ಹಚ್ಚ ಹಸುರಿನಿಂದ ಕೂಡಿರುವ ಸ್ತಬ್ಧಚಿತ್ರದ ಮಧ್ಯಭಾಗದಲ್ಲಿ 30 ಸಾವಿರಕ್ಕೂ ಹೆಚ್ಚು ಗಿಡಗಳನ್ನು ಬೆಳೆಸಿರುವ ಶ್ರೇಯಸ್ಸಿಗೆ ಪಾತ್ರರಾಗಿರುವ ವೃಕ್ಷ ಮಾತೆ ತುಳಸಿ ಗೌಡ ಹಾಲಕ್ಕಿ ಅವರ ಪ್ರತಿಕೃತಿಯನ್ನು ಇರಿಸಲಾಗಿದೆ. ಅಪರೂಪದ ಪ್ರಭೇದದ ಸಸ್ಯಗಳನ್ನು ಗುರುತಿಸಿ ಬೆಳೆಸುವಲ್ಲಿ ಪರಿಣತರಾಗಿದ್ದ ತುಳಸಿಗೌಡ ಹಾಲಕ್ಕಿ ಅವರನ್ನು ಚಿತ್ರಿಸಲಾಗಿದ್ದೂ ಅದೂ ಕೂಡ ನಯನ ಮನೋಹರವಾಗಿದೆ.

ಕಣ್ಣಿಗೆ ಮುದ ನೀಡುವ ಮತ್ತೊಂದು ಆಕರ್ಷಣೆ ಎಂದರೆ- ಕಾಡಿನ ನಿಜಸ್ವರೂಪದಂತಿರುವ ಸ್ತಬ್ಧಚಿತ್ರದ ಕೊನೆಯ ಭಾಗದಲ್ಲಿ ರಾಜ್ಯ ಹೆದ್ದಾರಿಯ ಆಜುಬಾಜಿನಲ್ಲಿ 8 ಸಾವಿರ ಮರಗಳನ್ನು ನೆಟ್ಟು ನೀರೆರೆದು ಬೆಳೆಸಿದ ಸಾಲುಮರದ ತಿಮ್ಮಕ್ಕ ಅವರ ಪ್ರತಿಕೃತಿಯನ್ನು ಅದ್ಭುತವಾಗಿ ಚಿತ್ರಿಸಿರುವುದು. ಸಾಲುಮರದ ತಿಮ್ಮಕ್ಕ ಅವರು ಗಿಡಗಳಿಗೆ ನೀರೆರೆಯುತ್ತಿರುವಂತೆ ಬಿಂಬಿಸಲಾಗಿದೆ. ಇದಲ್ಲದೆ 75 ಆಲದ ಮರಗಳನ್ನು 4.5 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಯಲ್ಲಿ ಬೆಳೆಸಿದ್ದಾರೆ. ಇದನ್ನು ಸ್ತಬ್ಧಚಿತ್ರದ ಕೊನೆಯ ಭಾಗದಲ್ಲಿ ಬೃಹತ್ ಆಲದ ಮರದ ಮೂಲಕ ಚಿತ್ರಿಸಲಾಗಿದೆ.

ರಾಷ್ಟ್ರ ರಾಜಧಾನಿಯ ಕರ್ತವ್ಯ ಪಥದಲ್ಲಿ ಜನವರಿ 26 ರಂದು ನಡೆದ ಪಥಸಂಚಲನದಲ್ಲಿ ಸಾವಿರಾರು ಜನರು ಭಾಗವಹಿಸಿ ಸುಂದರವಾದ ಸ್ತಬ್ಧ ಚಿತ್ರಗಳ ಪ್ರದರ್ಶನವನ್ನು ನೋಡಿ ಕಣ್ತುಂಬಿಕೊಳ್ಳುತ್ತಾರೆ. ಅಂತೆಯೇ ಕರ್ನಾಟಕದಿಂದಲೂ ಬಂದಿದ್ದ ನೂರಾರು ಜನರಲ್ಲಿ ಸೂಲಗಿತ್ತಿ ನರಸಮ್ಮ ಅವರ 12ನೇ ಮಗ ಪಾವಗಡ ಶ್ರೀರಾಮ್ ಅವರು ಕೂಡ ಒಬ್ಬರು. ತಮ್ಮ ತಾಯಿಯವರ ಕುರಿತು ನಿರ್ಮಿಸಿದ್ದ ಕರ್ನಾಟಕದ ನಾರಿ ಶಕ್ತಿ ಸ್ತಬ್ಧಚಿತ್ರದ ಬಗ್ಗೆ ನಂತರ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಹೆಮ್ಮೆಯನ್ನು ಸಂತಸವನ್ನು ವ್ಯಕ್ತಪಡಿಸಿದ್ದಾರೆ.

ತುಮಕೂರಿನಲ್ಲಿ ವಕೀಲ ವೃತ್ತಿಯಲ್ಲಿರುವ ಶ್ರೀರಾಮ್ ಅವರು ಪತ್ರಿಕಾ ವರದಿಗಾರರು ಹೌದು. ತಮ್ಮ ತಾಯಿಯ ಹೆಸರಿನಲ್ಲಿ ತುಮಕೂರಿನಲ್ಲಿ ಶಾಲೆ ಮತ್ತು ಸೂಲಗತ್ತಿ ನರಸಮ್ಮನವರ ಕ್ಯಾಂಪಸ್ ಅನ್ನೂ ಸಹಾ ನಡೆಸುತ್ತಿದ್ದಾರೆ.




ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ತಮ್ಮ ತಾಯಿಯ ಪುಣ್ಯಸ್ಮರಣೆಯ ಅಭಿನಂದನಾ ಗ್ರಂಥ 'ಜೀವ ರಕ್ಷಕಿ 'ಕೃತಿಯನ್ನು ಬಿಡುಗಡೆ ಮಾಡಿ ನೆರೆದಿದ್ದವರೆಲ್ಲರಿಗೂ ಪುಸ್ತಕವನ್ನು ಹಂಚಿ, ನಂತರ ಮಾತನಾಡಿದ ಶ್ರೀರಾಮ್ ಅವರು ಕರ್ನಾಟಕ ಸಂಘವು ಈ ಹಿಂದೆ 2017 ರಲ್ಲಿ ತಮ್ಮ ತಾಯಿಯವರನ್ನು ದೆಹಲಿಗೆ ಕರೆಸಿ ಗೌರವಿಸಿ ಸನ್ಮಾನಿಸಿದ್ದನ್ನು ಸ್ಮರಿಸಿಕೊಂಡರು. ತಮ್ಮ ತಾಯಿಯವರಿಗೆ ರಾಷ್ಟ್ರಪತಿಗಳಿಂದ ಪದ್ಮಶ್ರೀ ಪುರಸ್ಕಾರ ದೊರೆತಿದೆ ಎಂದು ಹೆಮ್ಮೆಯಿಂದ ನೆನಪಿಸಿಕೊಂಡ ಅವರು ಅದಕ್ಕಾಗಿ ಅಂದಿನ ಸಂಘದ ಕಾರ್ಯದರ್ಶಿಗಳಾಗಿದ್ದ ಈಗಿನ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ್ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಶ್ರೀರಾಮ್ ರವರಿಗೆ ಧನ್ಯವಾದಗಳನ್ನು ತಿಳಿಸಿ, ಸಂಘದ ಪರವಾಗಿ ಶಾಲು ಹೊದಿಸಿ ಸ್ಮರಣಿಕೆ ನೀಡಿ ಅಭಿನಂದಿಸಿದರು. ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಸದಸ್ಯರು ಮತ್ತು ಹಲವಾರು ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು.

**ಅಭಿಮತ ವರದಿ**

# ಅಮೃತ ಮಹೋತ್ಸವ ಆಚರಣೆಯ ಕುರಿತ ಅಧ್ಯಕ್ಷ ಸಿ.ಎಂ. ನಾಗರಾಜ ಅವರ ಅನುಭವಗಳು

ದೆಹಲಿ ಕರ್ನಾಟಕ ಸಂಘಕ್ಕೆ ಹೊಸ ಕಾರ್ಯಕಾರಿ ಸಮಿತಿ 2021–23 ನೇ ವರ್ಷದ ಅವಧಿಗೆ ಆಯ್ಕೆಯಾಗಿ ಬಂದ ನಂತರ ಕಾರ್ಯಕಾರಿ ಸಮಿತಿಯ ಜೊತೆ ಸೇರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಈ ಅಮೃತ ಮಹೋತ್ಸವ ವರ್ಷದಲ್ಲಿ ಯಾವ ರೀತಿ ನೀಡಬೇಕೆಂಬ ಒಂದು ದೊಡ್ಡ ಪ್ರಶ್ನೆ ನನ್ನ ಮನದಲ್ಲಿ ಮೂಡಿತ್ತು. ಏಕೆಂದರೆ, ಕಳೆದ ಸುಮಾರು 18 ವರ್ಷಗಳಲ್ಲಿ ಐದು ಬಾರಿ ಸಂಘದ ಕಾರ್ಯದರ್ಶಿಯಾಗಿ ಮೂರು ಅಧ್ಯಕ್ಷರುಗಳ ಜೊತೆ ಕೆಲಸ ಮಾಡಿದಾಗ ದೊರೆತ ಅನುಭವವನ್ನು ತೆಗೆದುಕೊಂಡು ತಮ್ಮೆಲ್ಲರ ಆಶೀರ್ವಾದದೊಂದಿಗೆ ಸಂಘದ ಪ್ರಸ್ತುತ ಅಧ್ಯಕ್ಷನಾಗಿ ಆಯ್ಕೆಯಾಗಿ ಬಂದಿದ್ದು ನನಗೆ ಅತ್ಯಂತ ಹೆಮ್ಮೆಯ ವಿಷಯವಾಗಿದ್ದು ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ.




ಕರ್ನಾಟಕ ಸಂಘಕ್ಕೆ ಯಾವುದೇ ಅಧ್ಯಕ್ಷರು ಬಂದರೂ ಒಂದು ಆಪಾದನೆಯಂತು ಯಾವಾಗಲು ಇತ್ತು. ಅವರು ತಮ್ಮ ತಮ್ಮ ಭಾಗದ ಕಲಾವಿದರಿಗೆ ಹೆಚ್ಚು ಆದ್ಯತೆ ನೀಡುತ್ತಾರೆ ಎಂಬುದು. ಆದರೆ ಈ ಬಾರಿ ಸಮಗ್ರ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಕಲಾವಿದರನ್ನು ಕರೆತಂದು ಎಲ್ಲಾ ಕಲಾತಂಡಗಳನ್ನ ಪ್ರಾಂತ್ಯವಾರು ಅಥವಾ ಜಾತಿವಾರು ಎಂಬ ಯಾವುದೇ ಭೇದ ಭಾವ, ತಾರತಮ್ಯವಿಲ್ಲದೆ ಎಲ್ಲಾ ಕನ್ನಡಿಗರು ಮೆಚ್ಚುವಂತ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಬೇಕೆಂದು ಹೊರಟಾಗ ಹಿಂದಿನ ಕಾರ್ಯಕಾರಿ ಸಮಿತಿಯಲ್ಲಿ ಇದ್ದಂತಹ ನನ್ನ ಆತ್ಮೀಯರು ಅಮೃತವರ್ಷದಲ್ಲಿ ಇಂತಹ ಅಧ್ಯಕ್ಷ ಬೇಕು ಎಂದು ಕನಸು ಕಂಡರು. ಅವರ ಆಶಯದಂತೆ ನಿಮ್ಮೆಲ್ಲರ ಮನ ಗೆಲ್ಲುವಂತ ಅಧ್ಯಕ್ಷ ನಾನಾಗಬೇಕೆಂದು ಬಯಕೆ ನನ್ನ ಮನದಲ್ಲಿ ಇತ್ತು. ಮೊಟ್ಟಮೊದಲಿಗೆ ಕಾರ್ಯಕಾರಿ ಸಮಿತಿಯಲ್ಲಿ ಈ ಅಮೃತ ವರ್ಷವನ್ನು ಪ್ರತಿ ವಾರ, ಪ್ರತಿ ತಿಂಗಳು ಕರ್ನಾಟಕದ ನಾನಾ ಜಿಲ್ಲೆಗಳ ಕಲೆಗಳನ್ನು ಕರ್ನಾಟಕ ಸಂಘದಲ್ಲಿ ನಮ್ಮ ಹೊಸ ಪೀಳಿಗೆಯ ಕನ್ನಡ ಮಕ್ಕಳಿಗೆ ಪರಿಚಯಿಸಬೇಕು ಎಂದು ಕಾರ್ಯಕಾರಿ ಸಮಿತಿಯಲ್ಲಿ ಪ್ರಸ್ತಾವಿಸಿ ಜಿಲ್ಲಾವಾರು ಸಾಂಸ್ಕೃತಿಕ ಉತ್ಸವಗಳನ್ನು ಮಾಡೋಣ ಎಂದು ಹೊರಟೆವು. ಈ ನನ್ನ ಹೊಸ ಆಲೋಚನೆಗೆ ಕಾರ್ಯಕಾರಿ ಸಮಿತಿಯು ಮೆಚ್ಚುಗೆ ಸೂಚಿಸುತ್ತಾ ಸಂಪೂರ್ಣ ಒಪ್ಪಿಗೆ ನೀಡಿತು. ಜೊತೆಗೆ ಕಾರ್ಯಕಾರಿ ಸಮಿತಿಯ ಕೆಲವು ಸದಸ್ಯರುಗಳಿಗೆ ಕೆಲವೊಂದು ಜಿಲ್ಲಾ ಕಾರ್ಯಕ್ರಮಗಳಿಗೆ ಜವಾಬ್ದಾರಿಗಳನ್ನು ನೀಡಲಾಯಿತು. ಅದಕ್ಕೂ ಎಲ್ಲರೂ ಒಪ್ಪಿಗೆ ಸೂಚಿಸಿದರು. ಒಂದು ಕಾರ್ಯಕ್ರಮಕ್ಕೆ ಸರಿಸುಮಾರು ಕರ್ನಾಟಕ ಸಂಘದಿಂದ ಎರಡು ಲಕ್ಷ ರೂಪಾಯಿಗಳ ಬಜೆಟ್ ಇಟ್ಟುಕೊಳ್ಳೋಣ ಎಂದು ಸಮಿತಿಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಯಿತು. ಆದರೆ ನನ್ನ ಮನಸ್ಸಲ್ಲಿ ಇದ್ದಿದ್ದು ಸಂಘಕ್ಕೆ ಯಾವುದೇ ಖರ್ಚಿಲ್ಲದೆ ಈ ಅಮೃತ ವರ್ಷದ ಸಂಭ್ರಮಾಚರಣೆಯಲ್ಲಿ ಸಾವಿರಾರು ಕಲಾವಿದರಿಗೆ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಪ್ರದರ್ಶನ ನೀಡಲು ಅವಕಾಶ ಮಾಡಿಕೊಡಬೇಕೆಂದು.

ಈ ನಿಟ್ಟಿನಲ್ಲಿ ಮೊದಲಿಗೆ ಯಾವ ಕಾರ್ಯಕ್ರಮವನ್ನು ಪ್ರಾರಂಭ ಮಾಡೋಣ ಎಂದು ಹೊರಟಾಗ ಪ್ರಥಮವಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉತ್ಸವವನ್ನು ಆಯೋಜಿಸೋಣ ಎಂದು ನಾನೇ ಅದರ ಜವಾಬ್ದಾರಿ ತೆಗೆದುಕೊಂಡು ಮುಂದುವರಿದೆ.

ಮೊಟ್ಟಮೊದಲಿಗೆ ಮಾನ್ಯ ಕೋಲಾರ ಸಂಸದರು ಹಾಗೂ ನಮ್ಮ ಆತ್ಮೀಯರಾದ ಶ್ರೀ ಮುನಿಸ್ವಾಮಿಯವರನ್ನು ತಮ್ಮ ಸಹಕಾರ ನೀಡಲು ಕೇಳಿಕೊಂಡೆ. ಈ ಕಾರ್ಯಕ್ರಮ ನಮ್ಮ ಮತ್ತು ನಿಮ್ಮ ಜಿಲ್ಲೆಯ ಕಾರ್ಯಕ್ರಮ ಆಗಿರುವ ಕಾರಣ ತುಂಬಾ ದೊಡ್ಡ ಖರ್ಚಿದೆ.ಇದಕ್ಕೆ ತಮ್ಮ ಸಹಕಾರ ಬೇಕೆಂದು ಕೇಳಿದಾಗ ಅವರು ಪ್ರೀತಿಯಿಂದ ಒಪ್ಪಿಕೊಂಡು ಕಾರ್ಯಕ್ರಮಕ್ಕೆ ತಗಲುವ ಊಟದ ವ್ಯವಸ್ಥೆಯನ್ನು ವಹಿಸಿಕೊಳ್ಳುತ್ತೇನೆ ಎಂದು ತಿಳಿಸಿದರು. ಜೊತೆಗೆ ಕೋಲಾರ ಜಿಲ್ಲೆಯ ನನ್ನ ಆತ್ಮೀಯರನ್ನು, ಸ್ನೇಹಿತರುಗಳಲ್ಲಿ ಕೆಲವರನ್ನ ಭೇಟಿ ಮಾಡಿ ಸಹಾಯ








ಕೋರಲಾಯಿತು.

ಶ್ರೀ ಮುನಿಮಾರಪ್ಪನವರು ಭೋವಿ ಸಮಾಜದ ಉಪಾಧ್ಯಕ್ಷರು, ಜೊತೆಗೆ ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೋಪಾಲಗೌಡರು ಮತ್ತು ನನ್ನ ಆತ್ಮೀಯರಾದ ಶ್ರೀ



ಪರಮೇಶ್ ಮಾಲೂರು ಒಕ್ಕಲಿಗ ಮುಖಂಡರು, ಜೆಡಿಎಸ್ ನ ಮುಖಂಡರಾದ ಶ್ರೀ ರಾಮೇಗೌಡರು, ಕಲಾವಿದರ ಬಳಗದ ಮಾಲೂರು ವಿಜಿ, ವಿದ್ವಾನ್ ಕೋಲಾರ ರಮೇಶ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಾಸಕರಾದ ನಮ್ಮ ಸೋದರರಾದ ಶ್ರೀ ಸಿಟಿ ರವಿ ರವರು ಹಾಗು ಇನ್ನು ಅನೇಕ ನನ್ನ ಬಂಧು ಮಿತ್ರರನ್ನ ನೂರಾರು ಕಲಾವಿದರನ್ನು ಕಾರ್ಯಕ್ರಮಕ್ಕೆ ಬರಮಾಡಿಕೊಳ್ಳಲಾಯಿತು.

ಮೊಟ್ಟ ಮೊದಲಿಗೆ, ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ಸಮ್ಮುಖದಲ್ಲಿ ಅವರ ಆಶೀರ್ವಾದದೊಂದಿಗೆ ಪ್ರಾರಂಭಿಸಲಾಯಿತು. ಎರಡು ದಿನಗಳ ಕಾಲ ನಡೆದ ಕಾರ್ಯಕ್ರಮ ತುಂಬಾ ಯಶಸ್ವಿಯಾಗಿ ಮೂಡಿ ಬಂತು. ಕರ್ನಾಟಕ ಸಂಘದ ಒಂದಿಷ್ಟೂ ಹಣವನ್ನು ಇದಕ್ಕೆ ಬಳಸಿಕೊಳ್ಳದೆ ಎಲ್ಲಾ ಸ್ನೇಹಿತರ ಸಹಾಯದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿದ್ದು ಜೊತೆಗೆ ಸಾಧ್ಯವಾದಷ್ಟು ಹಣವನ್ನು ಸಂಘಕ್ಕೆ ಉಳಿಸಿದ್ದು ಉತ್ತಮ ಪ್ರಯತ್ನವಾಗಿತ್ತು.

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉತ್ಸವ ಯಶಸ್ವಿಯಾದ ನಂತರ ನನಗೆ ಧೈರ್ಯ ಬಂತು. ಮುಂದುವರಿದು ಕಲ್ಯಾಣ ಕರ್ನಾಟಕ ಭಾಗದ ಕಾರ್ಯಕ್ರಮವನ್ನು ಮಾಡಬೇಕೆಂದು ಅದರ ಜವಾಬ್ದಾರಿಯನ್ನು ನನ್ನ ಕಾರ್ಯಕಾರಿ ಸಮಿತಿಯ ಸದಸ್ಯ ನನ್ನ ಮಿತ್ರ ಶ್ರೀ ಪ್ರಭಾಕರ್ ಮಡ್ಡಿತೋಟ್ ಮತ್ತು ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತ ಮುರಗೋಡರವರಿಗೆ ನೀಡಲಾಯಿತು. ಅವರ ಜೊತೆಗೂಡಿ ಸಮಾಲೋಚಿಸಿ ಗುಲ್ಬರ್ಗಕ್ಕೆ ಭೇಟಿ ನೀಡಿದೆ. ಅಲ್ಲಿ ಹಲವಾರು ನನ್ನ ಆತ್ಮೀಯ ಮಿತ್ರರನ್ನ ಸಂಪರ್ಕಿಸಿದೆ. ಜನಪ್ರಿಯ ಶಾಸಕರಾದ ನನ್ನ ಆತ್ಮೀಯ ಮಿತ್ರ ಶ್ರೀ ಬಸವರಾಜ್ ಮತ್ತಿಮೋಡ್‌ರವರನ್ನ ಭೇಟಿ ಮಾಡಿ ಅವರಿಗೆ ಕಾರ್ಯಕ್ರಮಕ್ಕೆ ಬರಲು ಕೇಳಿಕೊಂಡು ಕಾರ್ಯಕ್ರಮದ ಕಲಾವಿದರ ಊಟದ ವ್ಯವಸ್ಥೆಯನ್ನು ನೀಡಬೇಕೆಂದು ಕೇಳಿದಾಗ ಪ್ರೀತಿಯಿಂದ ಒಪ್ಪಿಗೆ ಕೊಟ್ಟು ಸಹಾಯವನ್ನು ಕೂಡ ನೀಡಿದರು. ಜೊತೆಗೆ ನಮ್ಮ ಕಲ್ಬುರ್ಗಿ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಉಮೇಶ್ ಜಾಧವ್ ಅವರನ್ನು ಸಹ ಕೇಳಿ ಕೊಂಡಾಗ ಪ್ರೀತಿಯಿಂದ ಅವರು ಕಾರ್ಯಕ್ರಮದ ಊಟದ ವ್ಯವಸ್ಥೆಗೆ ತಗುಲುವ ಖರ್ಚು ವೆಚ್ಚಗಳನ್ನು ವಹಿಸಿಕೊಳ್ಳಲು ಒಪ್ಪಿಗೆ ನೀಡಿದರು. ಕಾರ್ಯಕ್ರಮಕ್ಕೆ ಬಂದು ಸಹಾಯವನ್ನು ಸಹ ಮಾಡಿದರು ಜೊತೆಗೆ ಶಾಸಕರು ಮತ್ತು ತನ್ನ ಮಿತ್ರರಾದ ಶ್ರೀ ಅಪ್ಪು ಗೌಡ ಪಾಟೀಲ್, ಕಲ್ಬುರ್ಗಿ ರಂಗಾಯಣದ ನಿರ್ದೇಶಕರಾದ ಶ್ರೀ ಪ್ರಭಾಕರ್ ಜೋಶಿ, ಆತ್ಮೀಯ ಮಿತ್ರರಾದ ಶ್ರೀ ಚಿನ್ನೂರ್, ಕನ್ನಡ ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರು ಮತ್ತು ನನ್ನ ಜೊತೆ ಬಂದಂತ ಶ್ರೀ ರಂಜಿತ್ ಗುಲ್ಬರ್ಗ, ಶ್ರೀ ಬಸವರಾಜ್ ಸೇಡಂ ಮಾಜಿ ಸಂಸದರು ಇವರ ಜೊತೆಗೂಡಿ ಒಮ್ಮೆ ಎಲ್ಲಾ ಸ್ನೇಹಿತರುಗಳೊಂದಿಗೆ ಮಾತನಾಡಿ ಕಾರ್ಯಕ್ರಮಕ್ಕೆ ಸಹಕಾರವನ್ನು ಕೇಳಿಕೊಂಡಾಗ ಪ್ರೀತಿಯಿಂದ ನೀಡಲು ಒಪ್ಪಿಗೆ ಸೂಚಿಸಿದರು. ಇವರೆಲ್ಲರ ಸಹಕಾರದೊಂದಿಗೆ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಕಲೆಗಳನ್ನು ಕಲಾವಿದರನ್ನು ಕರೆತಂದು ಉತ್ತಮವಾದ ಶ್ರೀ ಸಿರಿ ಪುರಂದರ ನಾಟಕ ಪ್ರದರ್ಶನದೊಂದಿಗೆ ಕಾರ್ಯಕ್ರಮವನ್ನು ಭರ್ಜರಿಯಾಗಿ ಯಶಸ್ವಿಗೊಳಿಸಲಾಯಿತು. ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಅವರೆಲ್ಲರಿಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಕೃತಜ್ಞತೆಗಳು.

ಇದರ ಜೊತೆ ಜೊತೆಯಲ್ಲಿ 2022ರ ಆಗಸ್ಟ್ ತಿಂಗಳಲ್ಲಿ ಕರಾವಳಿ ಉತ್ಸವವನ್ನು ಆಯೋಜನೆ ಮಾಡಲಾಗಿದ್ದು ಇದಕ್ಕೆ ಕಾರ್ಯಕಾರಿ ಸಮಿತಿಯ ಕೆಲ ಸದಸ್ಯರು ಪದಾಧಿಕಾರಿಗಳಿಗೆ ಜವಾಬ್ದಾರಿ ನೀಡಲಾಗಿತ್ತು ಅದರಲ್ಲಿ ಶ್ರೀಮತಿ ಪೂಜಾರಾವ್ ಉಪಾಧ್ಯಕ್ಷರು, ಖಜಾಂಚಿಗಳಾದ ಶ್ರೀ ರಾಧಾಕೃಷ್ಣ ಮತ್ತು ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಮತ್ತು ಶ್ರೀಮತಿ ಸವಿತಾ ನೆಲ್ಲಿ ಇವರಿಗೆ ಕರಾವಳಿ ಉತ್ಸವದ ಜವಾಬ್ದಾರಿಯನ್ನು ನೀಡಿ ಕಲಾವದರೊಂದಿಗೆ ಮಾತನಾಡಿ ಗ್ರಾಮೀಣ ಪ್ರದೇಶಗಳಿಂದ ದೆಹಲಿಯವರೆಗೆ ಕರೆಸಿ ದೆಹಲಿ ಕರ್ನಾಟಕ ಸಂಘದ ವೇದಿಕೆಯನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದೇವೆ. ಇದು ಒಂದು ವಿಶೇಷ ಸಂದರ್ಭ. ಎರಡು ದಿನಗಳ ಕಾರ್ಯಕ್ರಮಗಳಲ್ಲಿ ಒಂದು ದಿನ ನಮ್ಮ ಆತ್ಮೀಯರೂ, ಉಡುಪಿ ಶಾಸಕರಾದ ಶ್ರೀ ರಘುಪತಿ ಭಟ್‌ರವರು ಕಲಾವಿದರ ಊಟಕ್ಕೆ ವ್ಯವಸ್ಥೆ ಮಾಡಿ ಮಾಡಿಕೊಟ್ಟಿದ್ದರು. ಸೌದಿ ಅರೇಬಿಯಾದಲ್ಲಿರುವ ಉದ್ಯಮಿ ಶ್ರೀ ಪರ್ಕಳ ರಜಬ್ ಬ್ಯಾರಿ ಅವರು ಕುಂದಾಪುರ ಕಲಾವಿದರ ಟಿಕೆಟ್ ಮತ್ತು ಸಂಭಾವನೆಗೂ ಸಹಕಾರ ನೀಡಿದ್ದಾರೆ ಆತ್ಮೀಯ ಮಿತ್ರರಾದ ಶ್ರೀ ಶ್ರೀಧರ್, ಉಡುಪಿ ಕಲಾವಿದರಿಗೆ ಸಹಾಯವಾಗಿ ನಿಂತಿದ್ದಾರೆ. ಅನೇಕ ಸ್ನೇಹಿತರ ಸಹಕಾರದೊಂದಿಗೆ ನೂರಾರು ಕಲಾವಿದರಿಗೆ ಸಂಘದ ವೇದಿಕೆಯಲ್ಲಿ ಅವಕಾಶ ಮಾಡಿಕೊಟ್ಟು ಅಹೋರಾತ್ರಿ ಯಕ್ಷಗಾನವನ್ನು ತುಂಬಿ ತುಳುಕಿದ ಸಭಾಂಗಣದಲ್ಲಿ 'ದಕ್ಷಯಜ್ಞ ಗದಾಯುದ್ಧ' ಯಕ್ಷಗಾನ ಪ್ರಸಂಗಗಳನ್ನು ಪೂರ್ತಿ ರಾತ್ರಿ ಸಾಲಿಗ್ರಾಮ ಮೇಳದ ಕಲಾವಿದರು ಪ್ರದರ್ಶನ ನೀಡಿದರು. ಈ ಎಲ್ಲಾ ಕಾರ್ಯಕ್ರಮಗಳು ನಡೆಯಲು ಸಹಕಾರವಾಗಿ ನಿಂತಂತ ನಮ್ಮ ಕಾರ್ಯಕಾರಿ ಸಮಿತಿಗೆ ಮತ್ತು ಸಹಾಯ ನೀಡಿದಂತಹ ಎಲ್ಲಾ ಹಿರಿಯರಿಗೆ ಮತ್ತು ಮಿತ್ರರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ತಿಳಿಸುತ್ತೇನೆ.

ಇದಾದ ನಂತರ ಅಕ್ಟೋಬರ್ ತಿಂಗಳಲ್ಲಿ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲಾ ಕಲಾ ಉತ್ಸವವನ್ನು ಸಹ ಮಾಡಲಾಯಿತು ಇದಕ್ಕೆ ನನ್ನ ಜೊತೆ ಸಂಪೂರ್ಣವಾಗಿ ಸಹಕಾರ ಕೊಟ್ಟಂತಹ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಜಯಪ್ರಕಾಶ್ ಗೌಡ್ರು ಮತ್ತು ಮಂಡ್ಯ ಶಾಸಕರಾದ ಮಾನ್ಯ ಶ್ರೀ ಶ್ರೀನಿವಾಸ್, ಮೇಲುಕೋಟೆ ಕ್ಷೇತ್ರ ಶಾಸಕರು, ಮಾಜಿ ಮಂತ್ರಿಗಳು ಕಲಾಪೋಷಕರಾದ ಶ್ರೀ












ಸಿ.ಎಸ್. ಪುಟ್ಟರಾಜು, ಮಾಜಿ ಸಂಸದರು ಹಾಗೂ ಮಾಜಿ ಸಚಿವರಾದ ಶ್ರೀ ಚೆಲುವರಾಯ ಸ್ವಾಮಿ, ಕರ್ನಾಟಕ ಸರ್ಕಾರದ ಮಂತ್ರಿಗಳೂ, ಮಂಡ್ಯ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಗೋಪಾಲಯ್ಯನವರು, ಮಾಜಿ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಶ್ರೀಕಂಠೇಗೌಡ್ರು ಮತ್ತು ಶ್ರೀ ರಾಮಕೃಷ್ಣ ಅವರುಗಳಿಗೆ ಕೃತಜ್ಞತೆಗಳು. ಈ ಕಾರ್ಯಕ್ರಮದ ಬೆನ್ನೆಲುಬಾಗಿ ನಿಂತು ಕಾರ್ಯಕ್ರಮಕ್ಕೆ ಕಾರಣಾಂತರಗಳಿಂದ ಬರದಿದ್ದರೂ ಸಹ ನನಗೆ ಧೈರ್ಯ ತುಂಬಿ ಸಹಕಾರವನ್ನು ನೀಡಿದ ಹಿರಿಯ ಅಣ್ಣ ಶ್ರೀ ಪುಟ್ಟರಾಜುರವರಿಗೆ ವಿಶೇಷವಾಗಿ ಧನ್ಯವಾದಗಳನ್ನು ಅರ್ಪಿಸಲೇಬೇಕು. ಅಷ್ಟೇ ಅಲ್ಲದೇ ಈ ಕಾರ್ಯಕ್ರಮ ಯಶಸ್ವಿಯಾಗಲು ನೂರಾರು ಕಲಾವಿದರನ್ನು ಮಂಡ್ಯದಿಂದ ದೆಹಲಿಗೆ ಕರೆಯಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಿದ ಜನಪ್ರಿಯ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಜಯಪ್ರಕಾಶ್ ಗೌಡರಿಗೆ ವಿಶೇಷ ಧನ್ಯವಾದಗಳು.

ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಾದ ಐಆರ್‌ಎಸ್ ಅಧಿಕಾರಿ ಶ್ರೀ ಜಯರಾಮ್ ರಾಯಪುರ, ಜಂಟಿ ಪೊಲೀಸ್ (ಸಂಚಾರ) ಆಯುಕ್ತರಾದ ಡಾ. ಬಿ.ಆರ್. ರವಿಕಾಂತೇ ಗೌಡರು ಹಾಗು ಇನ್ನೂ ಅನೇಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಕಾರ್ಯಕ್ರಮಕ್ಕೆ ಸಹಾಯವಾಗಿ ನಿಲ್ಲಲು ಅವರೊಂದಿಗೆ ಭೇಟಿ ಮಾಡಿ ನನ್ನ ಹೆಗಲಿಗೆ ಹೆಗಲು ಕೊಟ್ಟಂತಹ ದೆಹಲಿ ಕರ್ನಾಟಕ ಸಂಘದ ಹಿಂದಿನ ಕಾರ್ಯಕಾರಿ ಸಮಿತಿಯಲ್ಲಿ ಕೆಲಸ ಮಾಡಿದವರು ದೆಹಲಿಯಲ್ಲಿ ಇಲ್ಲದಿದ್ದರೂ ಸಹ ಅವರ ಸಂಪೂರ್ಣ ಸಮಯವನ್ನು ನನಗೆ ನೀಡಿದಂತಹ ನನ್ನ ಆತ್ಮೀಯ ಮಿತ್ರ ಶ್ರೀ ಪಿ.ಸಿ. ಶ್ರೀನಿವಾಸ್ ರವರಿಗೆ ವಿಶೇಷವಾಗಿ ನಾನು ಚಿರಋಣಿ.

ಈ ಮಂಡ್ಯ, ಹಾಸನ ಮತ್ತು ತುಮಕೂರು ಜಿಲ್ಲಾ ಉತ್ಸವ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಲು ದುಡಿದಂತ ಕಾರ್ಯಕಾರಿ ಸಮಿತಿಯ ಸದಸ್ಯ ಗುರುಗಾಂವ್ ಕನ್ನಡ ಸಂಘದ ಕಾರ್ಯದರ್ಶಿಗಳಾದ ಶ್ರೀ ಸಂತೋಷ್ ಜೆ ಅವರಿಗೆ ಧನ್ಯವಾದಗಳು. ಈ ಉತ್ಸವದಲ್ಲಿ ಇನ್ನೊಂದು ವಿಶೇಷವೇನೆಂದರೆ, ಕಾರ್ಯಕ್ರಮಕ್ಕೆ ಬಂದು ಸಹಾಯ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ನಂತರ ನನ್ನ ಎರಡು ಕನಸನ್ನ ನನಸು ಮಾಡುವಲ್ಲಿ ಪ್ರಯತ್ನ ಪಟ್ಟಂತೆ ಆಯ್ತು. ಅದೇನೆಂದರೆ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ದಾಸೋಹ ನಡೆಯಬೇಕು ಅಂದುಕೊಂಡಿದ್ದೆ ಅದಕ್ಕೆ ಸಹಕಾರವಾಗಿ ನಿಂತ ಮಾಜಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮಕೃಷ್ಣ ಅವರು ಒಂದು ವರ್ಷದ ದಾಸೋಹ ಕಾರ್ಯಕ್ರಮಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಿ ಅದಕ್ಕೆ ತಗಲುವ ಖರ್ಚನ್ನ ಕೊಡುತ್ತೇನೆ, ನಂತರ ನನ್ನ ಎಲ್ಲಾ ಸ್ನೇಹಿತರುಗಳೊಂದಿಗೆ ಅದನ್ನು ಮುಂದುವರಿಸೋಣ ಎಂದು ಭರವಸೆ ನೀಡಿ ಅವರು ಮುಂದಾಗಿದ್ದಾರೆ. ಈಗಲೂ ಸಹ ದಾಸೋಹ ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕೆಂದು ಪ್ರತಿದಿನ ಫೋನ್ ಮಾಡುತ್ತಾರೆ. ತಾಲ್ಕಟೋರ ಸ್ಟೇಡಿಯಂನಲ್ಲಿ ಅಮೃತ ಮಹೋತ್ಸವದ ಸಮಾರೋಪ ಕಾರ್ಯಕ್ರಮ ಮುಗಿದ ನಂತರ ಈ ದಾಸೋಹ ಅಭಿಯಾನವನ್ನು ಸಂಘದಲ್ಲಿ ಆರಂಭಿಸಲಾಗುವುದು.

ಜೊತೆಗೆ, ದೆಹಲಿ ಕರ್ನಾಟಕ ಸಂಘಕ್ಕೆ ಮತ್ತೊಂದು ಜಾಗದ ಅವಶ್ಯಕತೆ ಇದೆ ಎಂದು ಹೇಳಿದಾಗ ಪೂರ್ತಿ ಮಂಡ್ಯ ಕರ್ನಾಟಕ ಸಂಘದ ಪ್ರತಿನಿಧಿಗಳು ನನ್ನ ಜೊತೆಗೂಡಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಜಿಗಳನ್ನು ಭೇಟಿ ಮಾಡಿ ಉತ್ತರ ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥರಿಗೆ ಮನವಿಯನ್ನು ಸಹ ನೀಡುವಲ್ಲಿ ಸಹ ಭಾಗಿಯಾಗಿದ್ದಾರೆ.

ಅಕ್ಟೋಬರ್ ತಿಂಗಳ ಕೊನೆಯಲ್ಲಿ ಚಿಕ್ಕಮಗಳೂರು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಮಲೆನಾಡು ಉತ್ಸವವನ್ನು ಸಹ ಸಂಘದಲ್ಲಿ ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮದ ಜವಾಬ್ದಾರಿಯನ್ನ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಅವರಿಗೆ ನೀಡಲಾಗಿತ್ತು. ಇವರನ್ನು ಸಹ ನನ್ನ ಜೊತೆ ಕರೆದುಕೊಂಡು ಪೂರ್ತಿ ಮಲೆನಾಡನ್ನು ಸುತ್ತಿ ಬಂದು ನೂರಾರು ಕಲಾವಿದರನ್ನು ಒಟ್ಟುಗೂಡಿಸಿ ಶಿವಮೊಗ್ಗ ಶಾಸಕರು ಮಾನ್ಯ ಮಾಜಿ ಉಪ ಮುಖ್ಯಮಂತ್ರಿಗಳಾದ ಶ್ರೀ ಈಶ್ವರಪ್ಪನವರು, ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಗೃಹ ಮಂತ್ರಿಗಳು, ಶ್ರೀ ರುದ್ರೇಗೌಡರು ವಿಧಾನ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಶ್ರೀ ಬಿ.ವೈ. ರಾಘವೇಂದ್ರ, ಶಿವಮೊಗ್ಗ ಸಂಸದರು, ಜೊತೆಗೆ ಶಿವಮೊಗ್ಗ ರಂಗಾಯಣದ ನಿರ್ದೇಶಕರು ಶ್ರೀ ಸಂದೇಶ್ ಜವಳಿ, ಡಾ. ದಮಯಂತಿ ಗೌಡ, ಉದ್ಯಮಿ ಶ್ರೀ ವೆಂಕಟೇಶ್ವರ ಮೂರ್ತಿ, ಶ್ರೀಮತಿ ಆರಾಧನ, ಕೃಷಿ ಸಾಧಕ ಶ್ರೀ ವಿನಯ್ ಕಣಿವೆ, ಕಲಾವಿದರಾದ ಶ್ರೀ ಯು.ಎಸ್. ರಾಮಣ್ಣ, ಕಲಾವಿದರು ಮಿತ್ರರಾದ ಶ್ರೀ ರೇವನಾಥ್, ಹೊಂಗಿರಣ ತಂಡದ ನಿರ್ದೇಶಕರು, ಉಪನ್ಯಾಸಕರಾದ ಡಾ. ಸಾಸ್ವೆಹಳ್ಳಿ ಸತೀಶ್, ನೃತ್ಯಗುರು ಸಹಚೇತನ್, ನಮ್ಮ ಕನ್ನಡದ ಪೂಜಾರಿ ಕನ್ನಡದ ಕಟ್ಟಾಳು ಕನ್ನಡದ ಕುವರ ಶ್ರೀ ಹಿರೇಮಗಳೂರು ಕಣ್ಣನ್ ಮಾಮನವರ ಆಶೀರ್ವಾದದೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿತ್ತು. ಇನ್ನು ಅನೇಕ ಗಣ್ಯರು ಈ ಕಾರ್ಯಕ್ರಮಕ್ಕೆ ಸಹಕಾರವಾಗಿ ನಿಂತವರೆಲ್ಲರನ್ನೂ ನೆನಪಿಸಿಕೊಳ್ಳಲೇಬೇಕು ಇವರುಗಳನ್ನು ಭೇಟಿ ಮಾಡಿ ಸಹಕಾರ ಕೇಳಿದ್ದಕ್ಕೆ ಪ್ರೀತಿಯಿಂದ ಒಪ್ಪಿಕೊಂಡು ನಮ್ಮ ಜೊತೆ ಕಾರ್ಯಕ್ರಮದ ಯಶಸ್ವಿಗೆ ಕಾರಣಕರ್ತರಾಗಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಮಲೆನಾಡಿನ ನೂರಾರು ಕಲಾವಿದರನ್ನ ಒಂದೇ ವೇದಿಕೆಯಲ್ಲಿ ಜೊತೆಗೂಡಿಸಿ ಮಲೆನಾಡಿನ ಜಿಲ್ಲಾ ಕಲಾ ಉತ್ಸವದಲ್ಲಿ ಸುಂದರವಾದ ಎರಡು ನಾಟಕಗಳು 'ಹಕ್ಕಿ ಕಥೆ' ಮತ್ತು 'ಏಸೂರು ಕೊಟ್ಟೇವು ಈಸೂರು ಕೊಡೆವು' ಜೊತೆಗೆ ಮಲೆನಾಡಿನ ಇನ್ನು ಅನೇಕ ವೈವಿಧ್ಯಮಯ ಕಲಾ ಪ್ರಕಾರಗಳ ಪ್ರದರ್ಶನ ದೆಹಲಿ ಪ್ರೇಕ್ಷಕರ ಮನಸೆಳೆಯಿತು ಮತ್ತು ಅಪಾರ ಮೆಚ್ಚುಗೆ ಪಡೆಯಿತು ಈ ಕಾರ್ಯಕ್ರಮಕ್ಕೆ ನನ್ನ ಹೆಗಲಿಗೆ ಹೆಗಲು ಕೊಟ್ಟಂತಹ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಕೆ.ಎಸ್. ಮೂರ್ತಿರವರಿಗೆ ನಾನು ವಿಶೇಷವಾದ ಧನ್ಯವಾದಗಳು ತಿಳಿಸಲೇಬೇಕು.

ಡಿಸೆಂಬರ್ ತಿಂಗಳಲ್ಲಿ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲಾ ಕಲಾ ಉತ್ಸವಗಳನ್ನು ಆಯೋಜನೆ ಮಾಡಲಾಗಿದ್ದು, ಕಾರ್ಯಕ್ರಮದ ಜವಾಬ್ದಾರಿಯನ್ನ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಮತ್ತು ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ್ ಬಿ ರವರಿಗೆ ನೀಡಲಾಗಿತ್ತು. ಈ ಕಾರ್ಯಕ್ರಮವು ಸಹ 50ಕ್ಕೂ ಹೆಚ್ಚು ಕಲಾವಿದರೊಂದಿಗೆ ಬಗೆ ಬಗೆ ರೀತಿಯ ಕಲಾ ಪ್ರಕಾರಗಳ ಪ್ರದರ್ಶನದೊಂದಿಗೆ ಅತ್ಯಂತ ಯಶಸ್ವಿಯಾಗಿದೆ. ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು, ಯಶಸ್ಸಿನ ರೂವಾರಿಯಾದ ನಮ್ಮ ಕಾರ್ಯದರ್ಶಿಗಳಾದ ಶ್ರೀ ರೇಣುಕುಮಾರ್ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಮುಂದುವರಿದು ಕಿತ್ತೂರು ಕರ್ನಾಟಕ ಭಾಗದ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕಲಾ ಉತ್ಸವವನ್ನು ಸಹ ಡಿಸೆಂಬರ್ ತಿಂಗಳಲ್ಲಿ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು. ಈ ಕಾರ್ಯಕ್ರಮದ ಉಸ್ತುವಾರಿಯನ್ನು ಆತ್ಮೀಯ ಮಿತ್ರ ಶ್ರೀ ಚಂದ್ರಶೇಖರ ಎನ್.ಪಿ.ರವರು ವಹಿಸಿಕೊಂಡಿದ್ದು ಎಲ್ಲಾ ಸಂಸದರನ್ನ ಭೇಟಿ ಮಾಡಿ ಕಾರ್ಯಕ್ರಮಕ್ಕೆ ಭಾಗವಹಿಸಲು ಸಹಕಾರ ನೀಡಲು ಮನವಿ ನೀಡಲಾಗಿತ್ತು. ಈ ಮನವಿಗೆ ಕರ್ನಾಟಕ ಸರ್ಕಾರದ ಮಾನ್ಯ ಮಂತ್ರಿಗಳಾದ ಶ್ರೀಮತಿ ಶಶಿಕಲಾ ಜೊಲ್ಲೆ, ಚಿಕ್ಕೋಡಿ ಸಂಸದರಾದ ಮಾನ್ಯ ಶ್ರೀ ಅಣ್ಣಾಸಾಹೇಬ್ ಜೊಲ್ಲೆ, ಬೆಳಗಾವಿ ಸಂಸದೆ ಶ್ರೀಮತಿ ಮಂಗಳಾ ಅಂಗಡಿ ಈ ಕಾರ್ಯಕ್ರಮಕ್ಕೆ ಕೈಜೋಡಿಸಿದವರು. ಅವರಿಗೆ ಕೃತಜ್ಞತೆಗಳು. ವಿಶೇಷವಾಗಿ ನಮ್ಮ ದೆಹಲಿ ಕರ್ನಾಟಕ ಸಂಘದ ಸದಸ್ಯರು ಹಾಗೂ ಕರ್ನಾಟಕ ಸಂಘದ ಎಲ್ಲಾ ಕೆಲಸಕಾರ್ಯಗಳಿಗೆ ಕನ್ನಡಿಗರಿಗೆ ಜೊತೆ ನಿಲ್ಲುತ್ತಿರುವ ಹಿರಿಯ ಐಎಫ್‌ಎಸ್ ಅಧಿಕಾರಿ ಶ್ರೀ ಗಿರೀಶ್ ಹೊಸೂರು, ದೆಹಲಿಯಲ್ಲಿ ಭಾರತ ಸರ್ಕಾರದ ಅಧಿಕಾರಿಯಾಗಿರುವ ಶ್ರೀ ಶೇಷಕುಮಾರ್ ಗೋರೋಷಿ ಅವರು, ಬೆಳಗಾವಿಯ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಮಹಾಂತೇಶ ವಕ್ಕುಂದ ಇವರಿಗೆ ವಿಶೇಷವಾದ ಧನ್ಯವಾದಗಳನ್ನು ತಿಳಿಸಲೇಬೇಕು. ಏಕೆಂದರೆ ಇವರು ದೆಹಲಿ ಕರ್ನಾಟಕ ಸಂಘದ ಎಲ್ಲಾ ಕಾರ್ಯಕ್ರಮಗಳನ್ನು ವೀಕ್ಷಣೆ ಮಾಡುವ ಮೂಲಕ ಜೊತೆಗೆ ಸಹಾಯ ಹಸ್ತ ನೀಡುತ್ತಿರುವ ಹಿರಿಯ ಅಧಿಕಾರಿಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಜಿಲ್ಲೆ ಮತ್ತು ಕಿತ್ತೂರು ಭಾಗದ ನೂರಾರು ಕಲಾವಿದರನ್ನು ಕರೆಯಿಸಿ ಅವರಿಂದ ಬಗೆ ಬಗೆ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುವಲ್ಲಿ ಯಶಸ್ವಿಯಾಗಿದ್ದೇವೆ.

ಈ ಎಲ್ಲಾ ಕಲಾವಿದರು ದೆಹಲಿ ಕನ್ನಡಿಗರ ಮನೆಗೆದ್ದಿದ್ದಾರೆ. ಈ ಕಾರ್ಯಕ್ರಮಕ್ಕೆ ನನ್ನ ಜೊತೆ ನಿಂತು ಸಂಪೂರ್ಣ ಜವಾಬ್ದಾರಿಯನ್ನು ನಿಭಾಯಿಸಿ ಯಶಸ್ಸಿನಲ್ಲಿ ಭಾಗಿಯಾದ ಮಿತ್ರ ಶ್ರೀ ಚಂದ್ರಶೇಖರ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಎಲ್ಲಾ ಜಿಲ್ಲಾವಾರು ಕಾರ್ಯಕ್ರಮಗಳ ಕೊನೆಯ ವಿಶೇಷ ಕಾರ್ಯಕ್ರಮ ಬೆಂಗಳೂರು ಹಬ್ಬ ಬೆಂಗಳೂರು ನಿರ್ಮಾತ ನಾಡಪ್ರಭು ಶ್ರೀ ಕೆಂಪೇಗೌಡರ ಕನಸಿನ ಅಖಂಡ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ, ಕನಕಪುರ ಭಾಗಗಳಿಂದ ಎಲ್ಲಾ ಕಲಾವಿದರನ್ನು ಕರೆಸಿ 125ಕ್ಕೂ ಹೆಚ್ಚು ಕಲಾವಿದರರಿಂದ ಬಗೆ ಬಗೆ ರೀತಿಯ ಕಲಾ ಪ್ರಕಾರಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೆಹಲಿ ಜನರಿಗೆ ನೀಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ. ಬೆಂಗಳೂರಿನ ವಿಶ್ವ ಪ್ರಸಿದ್ಧ ಕರಗ ಪ್ರದರ್ಶನ ದೆಹಲಿ ಕನ್ನಡಿಗರ ಮನಸೂರೆ ಗೊಂಡಿತು.

ಈ ಬೆಂಗಳೂರು ಹಬ್ಬ ಕಾರ್ಯಕ್ರಮಕ್ಕೆ ಸಹಕಾರವಾಗಿ ನಿಂತಂತ ನಮ್ಮ ಸ್ನೇಹಿತರಾದ ಶ್ರೀ ನಯನಗೌಡ, ಬೆಂಗಳೂರು ಶ್ರೀ ಬಾಬು ಆನೇಕಲ್, ಶ್ರೀ ಗೋಪಿ, ಕರ್ನಾಟಕ ಜಾನಪದ ಜಾತ್ರೆ ನಿರ್ದೇಶಕಿ ಶ್ರೀಮತಿ ಜಯಮ್ಮ, ಕಲಾವಿದ, ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ. ನಾಗರಾಜ್, ಜಾನಪದ ಜಾತ್ರೆ ರಾಜ್ಯ ಸಂಯೋಜಕರಾದ, ಗಾಯಕ ಡಾ. ಬಿ.ಆರ್. ಶಿವಕುಮಾರ್, ಕಲಾವಿದ ಶ್ರೀ ವಿದ್ವಾನ್ ಕೋಲಾರ ರಮೇಶ್, ಒಕ್ಕಲಿಗ ವಾಯ್ಸ್ ಪತ್ರಿಕೆ ಸಂಪಾದಕರಾದ ಶ್ರೀ ಎಸ್. ನಾಗಭೂಷಣ, ವಿಶ್ವ ಮಾನವ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಶ್ರೀ ಆಡಿಟರ್ ನಾಗರಾಜ್ ಇನ್ನೂ ಅನೇಕ ಗಣ್ಯರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಇದರ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ಆರ್ಥಿಕವಾಗಿ ಹಾಗೂ ಭೌತಿಕವಾಗಿ ನನ್ನ ಹೆಗಲಿಗೆ ಹೆಗಲು ಕೊಟ್ಟ ನಮ್ಮ ಸಂಘದ ಉಪಾಧ್ಯಕ್ಷರಾದ ವಿಜ್ಞಾನಿ ಡಾ. ಎಂ.ಎಸ್. ಶಶಿಕುಮಾರ್‌ರವರಿಗೆ ಮನದಾಳದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಏಪ್ರಿಲ್ 2022 ರಂದು ಪ್ರಾರಂಭವಾದ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಎಂಟು ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿದ್ದು, ಸುಮಾರು ಒಂದು ಸಾವಿರಕ್ಕೂ ಹೆಚ್ಚು ಕಲಾವಿದರು ದೆಹಲಿಗೆ ಬಂದು ಸಂಘದ ವೇದಿಕೆಯಲ್ಲಿ ಪ್ರದರ್ಶನ ನೀಡಿ ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಸುಮಾರು ಒಂದು ಕೋಟಿ ರೂಪಾಯಿಗೂ ಹೆಚ್ಚು ಧನವನ್ನು ದಾನಿಗಳಿಂದ ಕ್ರೋಢಿಕರಿಸಿ ಸಂಘಕ್ಕೆ ಒಂದು ರೂಪಾಯಿಯಷ್ಟು ಹೊರೆಯಾಗದಂತೆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜನೆ ಮಾಡಲಾಗಿದೆ. ಎಲ್ಲ ಕಾರ್ಯಕ್ರಮಗಳಿಗೆ ನಿರಂತರವಾಗಿ ಬಂದು ಯಶಸ್ಸಿನಲ್ಲಿ ಭಾಗಿಯಾದ ನಮ್ಮ ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ ಅನಂತಾನಂತ ಧನ್ಯವಾದಗಳು.


# 2023 ರ ಸಾಲಿನ ದೇಶದ ಅತ್ಯುನ್ನತ ಪದ್ಮ ಪ್ರಶಸ್ತಿಗಳಿಗೆ ಭಾಜನರಾದ ಕನ್ನಡ ನಾಡಿನ ಗಣ್ಯ ಸಾಧಕರು


ಭಾರತ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮ ಪ್ರಶಸ್ತಿಗಳನ್ನು ಪದ್ಮ ವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಎಂಬ ಮೂರು ವಿಭಾಗಗಳಲ್ಲಿ ನೀಡಲಾಗುತ್ತದೆ. ಕಲೆ, ಸಮಾಜ ಸೇವೆ, ಸಾರ್ವಜನಿಕ ವ್ಯವಹಾರಗಳು, ವಿಜ್ಞಾನ ಮತ್ತು ಎಂಜಿನಿಯರಿಂಗ್, ವ್ಯಾಪಾರ ಮತ್ತು ಕೈಗಾರಿಕೆ, ವೈದ್ಯಕೀಯ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ, ನಾಗರಿಕ ಸೇವೆ ಮುಂತಾದ ವಲಯಗಳ ವಿವಿಧ ವಿಭಾಗಗಳು / ಕ್ಷೇತ್ರಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಅಸಾಧಾರಣ ಮತ್ತು ವಿಶಿಷ್ಟ ಸೇವೆಗಾಗಿ 'ಪದ್ಮ ವಿಭೂಷಣ' ನೀಡಲಾಗುತ್ತದೆ. ಉನ್ನತ ಶ್ರೇಣಿಯ ವಿಶಿಷ್ಟ ಸೇವೆಗಾಗಿ 'ಪದ್ಮಭೂಷಣ' ಮತ್ತು ಯಾವುದೇ ಕ್ಷೇತ್ರದಲ್ಲಿ ವಿಶಿಷ್ಟ ಸೇವೆಗಾಗಿ 'ಪದ್ಮಶ್ರೀ' ಪ್ರಶಸ್ತಿಯನ್ನು ಪ್ರತಿ ವರ್ಷ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಘೋಷಿಸಲಾಗುತ್ತದೆ. ಈ ವರ್ಷ 6 ಪದ್ಮವಿಭೂಷಣ, 9 ಪದ್ಮಭೂಷಣ ಮತ್ತು 91 ಪದ್ಮಶ್ರೀ ಪ್ರಶಸ್ತಿಗಳು ಸೇರಿವೆ. ಪ್ರಶಸ್ತಿ ಪುರಸ್ಕೃತರ ಈ ಪಟ್ಟಿಯಲ್ಲಿ 19 ಮಹಿಳೆಯರು ಮತ್ತು ಇಬ್ಬರು ವಿದೇಶಿಯರು / ಎನ್‌ಆರ್.ಐ. / ಪಿಐಒ / ಒಸಿಐ ವರ್ಗದ ವ್ಯಕ್ತಿಗಳು ಸೇರಿದ್ದು, 7 ಮರಣೋತ್ತರ ಪ್ರಶಸ್ತಿ ನೀಡಲಾಗಿದೆ.


ಅವುಗಳಲ್ಲಿ ಕನ್ನಡ ನಾಡಿನ ಎಂಟು ಗಣ್ಯ ಸಾಧಕರು ಕೂಡ ಈ ಬಾರಿಯ ಪದ್ಮ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿ ಪುರಸ್ಕೃತರಲ್ಲಿ ಒಬ್ಬರಿಗೆ ಪದ್ಮವಿಭೂಷಣ, ಇಬ್ಬರಿಗೆ ಪದ್ಮಭೂಷಣ ಮತ್ತು ಐದು ಜನರಿಗೆ ಪದ್ಮಶ್ರೀ ಪ್ರಶಸ್ತಿಗಳು ದೊರಕಿವೆ.


ಎಸ್.ಎಂ. ಕೃಷ್ಣ


ಸುಧಾ ಮೂರ್ತಿ



ಡಾ॥ ಎಸ್.ಎಲ್. ಭೈರಪ್ಪ


ಎಸ್. ಸುಬ್ಬರಾಮನ್


ಡಾ. ಖಾದರ್ ವಲಿ


ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ


ಐಮುಡಿಯಂಡ ರಾಣಿ ಮಾಚಯ್ಯ


ಶಾ ರಶೀದ್ ಅಹಮದ್ ಖಾದ್ರಿ

**ಶ್ರೀ ಎಸ್.ಎಂ. ಕೃಷ್ಣ–ಪದ್ಮ ವಿಭೂಷಣ** : ಕರ್ನಾಟಕದ ಹಿರಿಯ ರಾಜಕಾರಣಿ, ಶ್ರೀ ಎಸ್.ಎಂ. ಕೃಷ್ಣ ಅವರಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಮಾಡಿರುವ ಅಪರಿಮಿತ ಸೇವೆಯನ್ನು ಪರಿಗಣಿಸಿ ಪದ್ಮವಿಭೂಷಣ ನೀಡಲಾಗಿದೆ. ಎಸ್.ಎಂ. ಕೃಷ್ಣ ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ, ಮಹಾರಾಷ್ಟ್ರ ರಾಜ್ಯದ ರಾಜ್ಯಪಾಲರಾಗಿ ಮತ್ತು ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಿಗಳಾಗಿ ಸಲ್ಲಿಸಿರುವ ಸೇವೆ ಮತ್ತು ಗಳಿಸಿದ ಅಪಾರ ಅನುಭವಗಳಿಂದ ದೇಶದ ಶ್ರೇಷ್ಠ ರಾಜಕೀಯ ಮುತ್ಸದ್ದಿಗಳಾಗಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣಕ್ಕೆ ಸರ್ಕಾರದಿಂದ ಅರ್ಥಿಕ ನೆರವನ್ನು ನೀಡಿ ದೆಹಲಿಯಲ್ಲಿ ಕನ್ನಡಿಗರ ಭವ್ಯವಾದ ಸಾಂಸ್ಕೃತಿಕ ಸೌಧ ನಿರ್ಮಾಣಕ್ಕೆ ಸಹಾಯ ಹಸ್ತ ಚಾಚಿದ ಸಾಹಿತ್ಯ ಸಂಸ್ಕೃತಿ, ಕಲಾ ಪೋಷಕರಾಗಿ ದೆಹಲಿ ಕನ್ನಡಿಗರ ಮನಸ್ಸಿನಲ್ಲಿ ಸದಾ ಅಚ್ಚಳಿಯದೆ ಉಳಿದಿದ್ದಾರೆ.

**ಶ್ರೀಮತಿ ಸುಧಾ ಮೂರ್ತಿ–ಪದ್ಮ ಭೂಷಣ:** ಜನಸಾಮಾನ್ಯನ ಏಳಿಗೆಗಾಗಿ ಇನ್ಫೋಸಿಸ್ ಪ್ರತಿಷ್ಠಾನ, 'ಗೇಟ್ಸ್ ಫೌಂಡೇಶನ್' ಸೇರಿದಂತೆ ಹಲವು ಸಂಘ ಸಂಸ್ಥೆಗಳೊಂದಿಗೆ ದುಡಿಯುತ್ತಿರುವ ಅಪ್ಪಟ ಕನ್ನಡತಿ, ಅಸಾಮಾನ್ಯ ಸಾಧಕಿ ಕೊಡುಗೈ ದಾನಿ, ನೊಂದವರ ನೋವಿಗೆ ತಕ್ಷಣ ಸ್ಪಂದಿಸುವ ಕರುಣಾಮಯಿ ಸುಧಾ ಮೂರ್ತಿ ಮೇಡಂ ಅವರು ಪದ್ಮ ಭೂಷಣ ಪ್ರಶಸ್ತಿ ಪುರಸ್ಕೃತರಾಗಿರುವುದು ನಿಜಕ್ಕೂ ಸಂತಸದ ಸಂಗತಿ.

ಅನೇಕ ಜನಪ್ರಿಯ ಕಥೆ, ಕಾದಂಬರಿಗಳನ್ನು ಬರೆದಿರುವ ಜನಪ್ರಿಯ ಬರಹಗಾರ್ತಿಯೂ ಆಗಿರುವ ಅವರು ತಮ್ಮ ಬಿಡುವಿಲ್ಲದ ಸಮಾಜಕಾರ್ಯದ ನಡುವೆಯೂ ಅವರು ಕಂಪ್ಯೂಟರ್ ವಿಜ್ಞಾನವನ್ನೂ ಕಲಿಸುತ್ತಿದ್ದಾರೆ. ಶಾಲೆ ಮತ್ತು ಸಂಘ ಸಂಸ್ಥೆಗಳಿಗೆ ಗ್ರಂಥಾಲಯ ಸೌಲಭ್ಯ ಒದಗಿಸಲು ಕೂಡ ಆರ್ಥಿಕ ನೆರವು ನೀಡುತ್ತಾ ಬಂದಿರುವ ಸುಧಾ ಮೂರ್ತಿ ಅವರು ದೆಹಲಿ ಕರ್ನಾಟಕ ಸಂಘದ ಗ್ರಂಥಾಲಯಕ್ಕಾಗಿ ಉದಾರ ಅರ್ಥಿಕ ನೆರವು ನೀಡಿದ್ದು ದೆಹಲಿ ಕನ್ನಡಿಗರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಈ ವರ್ಷ ಇವರಿಗೆ ಪದ್ಮ ಭೂಷಣ ಪ್ರಶಸ್ತಿ ದೊರಕಿರುವುದು ಸಮಸ್ತ ಕನ್ನಡಿಗರಿಗೂ ಸಂತೋಷ ತಂದಿದೆ.

**ಡಾ॥ ಎಸ್.ಎಲ್. ಭೈರಪ್ಪ–ಪದ್ಮ ಭೂಷಣ** : ಕನ್ನಡ ಸಾರಸ್ವತ ಲೋಕಕ್ಕೆ ಮೊದಲ 'ಸರಸ್ವತಿ ಸಮ್ಮಾನ್' ಪ್ರಶಸ್ತಿಯ ಗೌರವವನ್ನು ತಂದುಕೊಟ್ಟ ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪನವರು ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತಾದ್ಯಂತ ಸಾಹಿತ್ಯಾಸಕ್ತರಿಗೆ ಚಿರಪರಿಚಿತರಾಗಿದ್ದಾರೆ. ಭಾರತದ ಬಹುತೇಕ

ಭಾಷೆಗಳಿಗೆ ಅನುವಾದಗೊಂಡಿರುವ ಇವರ ಕನ್ನಡ ಕಾದಂಬರಿ ಸಾಹಿತ್ಯದಿಂದಾಗಿ ರಾಷ್ಟ್ರೀಯ ಮಟ್ಟದಲ್ಲಿ ಎಸ್.ಎಲ್. ಭೈರಪ್ಪನವರು ಕೀರ್ತಿಗೆ ಪಾತ್ರರಾಗಿದ್ದಾರೆ. ತಮ್ಮ ತತ್ತ್ವಶಾಸ್ತ್ರ ಮತ್ತು ಸಂಸ್ಕೃತಿಯ ಆಳವಾದ ಅಧ್ಯಯನದೊಂದಿಗೆ, ಬಾಲ್ಯದ ಗ್ರಾಮೀಣ ಜೀವನ ಮತ್ತು ಮಹಾನಗರದ ಬದುಕನ್ನು ಹತ್ತಿರದಿಂದ ಕಂಡ ಭೈರಪ್ಪ ನವರ ಕಾದಂಬರಿಗಳ ಕಥಾವಸ್ತು ಮಾನವ ಸಹಜ ಸಂವೇದನಗಳ ಸುತ್ತ ಹೊಸೆದುಕೊಳ್ಳುತ್ತವೆ ಹಾಗೂ ಅಧ್ಯಯನ ಮತ್ತು ಜೀವನಾನುಭವ ಮಿಳಿತಗೊಂಡು ಸೃಷ್ಟಿಯಾಗುವ ಅವರ ಕಾದಂಬರಿಯ ಪಾತ್ರಗಳು ತಮ್ಮ ಬೇರುಗಳನ್ನು ಭಾರತೀಯ ನೆಲದಲ್ಲಿ ಕಂಡುಕೊಳ್ಳುತ್ತವೆ. ಇವರ ಕಾದಂಬರಿಗಳು ಭಾರತದ ಬಹುತೇಕ ಭಾಷೆಗಳಿಗೆ ಅನುವಾದಗೊಂಡಿವೆ. ಜ್ಞಾತಕಲಾವಿದರಾದ ಡಾ. ಎಸ್.ಎಲ್. ಭೈರಪ್ಪ ಅವರಿಗೆ ಈ ವರ್ಷ ಪದ್ಮ ಭೂಷಣ ಪ್ರಶಸ್ತಿ ದೊರಕಿರುವುದು ಕನ್ನಡಿಗರಿಗೆ ಮತ್ತು ಸಾಹಿತ್ಯಾಸಕ್ತ ಭಾರತೀಯರಿಗೂ ಹೆಮ್ಮೆಯ ವಿಷಯ. ಇವರು ಈ ಹಿಂದೆ ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

**ಶ್ರೀ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ–ಪದ್ಮಶ್ರೀ** : ಹದಿನೇಳನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ನಂತರ ತಂದೆಯಿಂದ ಕಲಿತ ತಮಟೆ ಬಾರಿಸುವ ಕೌಶಲ್ಯವನ್ನೇ ವೃತ್ತಿಯನ್ನಾಗಿಸಿಕೊಂಡ ಮುನಿವೆಂಕಟಪ್ಪ ಅವರು ದೇಶ ವಿದೇಶಗಳಲ್ಲೂ ತಮಟೆ ವಾದ್ಯವನ್ನು ಜನಪ್ರಿಯಗೊಳಿಸಿದ್ದಾರೆ. ಅಮೆರಿಕಾದ ಅಕ್ಕ ಸಮ್ಮೇಳನ, ನಾವಿಕ ಸಮ್ಮೇಳನದಲ್ಲಿ ಹಾಗೂ ಜಪಾನ್ ನಲ್ಲಿಯೂ ತಮ್ಮಟೆ ವಾದ್ಯವನ್ನು ಮೊಳಗಿಸಿ ಜನಮನ ಗೆದ್ದಿದ್ದಾರೆ. ಯುವ ಪೀಳಿಗೆಗೆ ತಮಟೆ ಕಲೆಯ ತರಭೇತಿ ನೀಡಲು ಉತ್ಸುಕತೆ ಹೊಂದಿರುವ ಇಂತಹ ಅಪ್ರತಿಮ ಕಲಾವಿದ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ ಅವರಿಗೆ ಪದ್ಮಶ್ರೀ ದೊರೆತಿರುವುದು ನಿಜಕ್ಕೂ ಹೆಮ್ಮೆಯ ವಿಷಯ.

**ಶ್ರೀಮತಿ ಐಮುಡಿಯಂಡ ರಾಣಿ ಮಾಚಯ್ಯ–ಪದ್ಮಶ್ರೀ :** ಕೊಡಗಿನ ಸಾಂಪ್ರದಾಯಿಕ ನೃತ್ಯವಾದ "ಉಮ್ಮತಾಟ್" ಅನ್ನು ಕಳೆದ 3 ದಶಕಗಳಿಂದ ಕಲಿಸುತ್ತಾ ಬಂದಿರುವ ರಾಣಿ ಮಾಚಯ್ಯ 10 ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ಈ ಜನಪದ ನೃತ್ಯ ಕಲಿಸಿದವರು. ದೇಶದ ವಿವಿದೆಡೆ ತಮ್ಮ ತಂಡದೊಂದಿಗೆ ಈ ನೃತ್ಯ ಪ್ರದರ್ಶಿಸಿ, ಈ ಕಲೆಯನ್ನು ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಯಾವ ವಿವಾದವಿಲ್ಲದೆ ಅಚ್ಚುಕಟ್ಟಾಗಿ ತಮ್ಮ ಕರ್ತವ್ಯ ನಿರ್ವಹಿಸಿದ ಹಿರಿಮೆಗೆ ಪಾತ್ರರಾಗಿರುವ ಐಮುಡಿಯಂಡ ರಾಣಿ ಮಾಚಯ್ಯ ಇವರಿಗೆ ಈ ಬಾರಿಯ ಪದ್ಮಶ್ರೀ ಪ್ರಶಸ್ತಿ ದೊರೆತಿರುವುದು ನಮ್ಮೆಲ್ಲರಿಗೂ ಹರ್ಷ ತಂದಿದೆ.

**ಶ್ರೀ ಶಾ ರಶೀದ್ ಅಹಮದ್ ಖಾದ್ರಿ–ಪದ್ಮಶ್ರೀ** : ವಿಶ್ವ ವಿಖ್ಯಾತ ಬಿದ್ರಿ ಕಲೆಯ ಹಿರಿಯ ಕರಕುಶಲಕರ್ಮಿ ಶಾಹ್ ರಶೀದ್ ಅಹ್ಮದ್ ಖಾದ್ರಿ ಅವರು–ಈ ಹಿಂದೆ ವಿದೇಶಿ ಪ್ರವಾಸ ಬದಿಗಿಟ್ಟು ದೇಶದ ಗಣರಾಜ್ಯೋತ್ಸವದಲ್ಲಿ ಬಿದ್ರಿ ಕಲೆಯ ಟ್ಯಾಬ್ಲೋದ ಮುಂದಾಳತ್ವ ವಹಿಸಿದ್ದರೆಂಬುದನ್ನು ಓದಿದಾಗ ತಮ್ಮ ಪೂರ್ವಜರಿಂದ ಕಲಿತ ಕಲೆಯನ್ನು ಸಂರಕ್ಷಿಸಿಕೊಂಡು ಬರಲು ಹಾಗೂ ಅದಕ್ಕೆ ರಾಷ್ಟ್ರವ್ಯಾಪಿ ಪ್ರಸಿದ್ಧಿ ತಂದುಕೊಡಲು ರಷೀದ್ ಅಹ್ಮದ್ ಖಾದ್ರಿ ಅವರು ಪಡುತ್ತಿರುವ ಪರಿಶ್ರಮ ಮತ್ತು ಅವರ ಕಾಳಜಿ ನಿಜಕ್ಕೂ ಹೆಮ್ಮೆ ತರುತ್ತದೆ. ಅಂತಹ ಅಸಾಧಾರಣ ಕುಶಲ ಕರ್ಮಿ ಶಾ ರಷೀದ್ ಅಹ್ಮದ್ ಖಾದ್ರಿ ಅವರಿಗೆ ಈಗ ದೇಶದ ಅತ್ಯುನ್ನತ ಪದ್ಮಶ್ರೀ ಪ್ರಶಸ್ತಿ ಬಂದಿರುವುದು ಕೂಡ ಬಹಳ ಸಂತೋಷದ ಸಂಗತಿ.

**ಶ್ರೀ ಎಸ್. ಸುಬ್ಬರಾಮನ್–ಪದ್ಮಶ್ರೀ** : ಪುರಾತತ್ವ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ 94 ವರ್ಷದ ಎಸ್. ಸುಬ್ಬರಾಮನ್ ಅವರು ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ (ಎಎಸ್ಐ)ದಲ್ಲಿ ಅಧೀಕ್ಷಕ ಪುರಾತತ್ವ ರಸಾಯನಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸಿದ್ದಾರೆ. ಈಗ ಮೈಸೂರಿನಲ್ಲಿ ನೆಲೆಸಿರುವ ಸುಬ್ಬರಾಮನ್ ಅವರು ದಕ್ಷಿಣ ರಾಜ್ಯಗಳು ಮತ್ತು ಮಹಾರಾಷ್ಟ್ರ ಮತ್ತು ಗುಜರಾತ್‌ನ ಪಾರಂಪರಿಕ ಸ್ಮಾರಕಗಳನ್ನು ಸಂರಕ್ಷಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಅವರು ಅಜಂತಾ ಗುಹೆಗಳಿಂದ ಹಳೇಬೀಡು ದೇವಸ್ಥಾನ ಮತ್ತು ಅಫ್ಘಾನಿಸ್ತಾನದ ಬಾಮಿಯಾನ್ ಬುದ್ಧನ ಪ್ರತಿಮೆಗಳವರೆಗಿನ ಭಿತ್ತಿಚಿತ್ರಗಳನ್ನು ಮರುಸ್ಥಾಪಿಸಲು ಹೆಸರುವಾಸಿಯಾಗಿದ್ದಾರೆ.

**ಡಾ. ಖಾದರ್ ವಲಿ–ಪದ್ಮಶ್ರೀ** : ಸಿರಿ ಧಾನ್ಯ ಪ್ರಚಾರಣೆ ಹಾಗೂ ವಿಜ್ಞಾನ, ಆಹಾರ & ಆರೋಗ್ಯ ಕ್ಷೇತ್ರದಲ್ಲಿ ನೀಡಿರುವ ಅಪಾರ ಕೊಡುಗೆ ಮತ್ತು ನೀಡಿರುವ ಸೇವೆಯನ್ನು ಪರಿಗಣಿಸಿ ಖಾದರ್ ವಲಿ ಯವರಿಗೆ ಪದ್ಮಶ್ರೀ ಪ್ರಶಸ್ತಿ ಒಲಿದು ಬಂದಿದ್ದು. ತಮ್ಮ ಸಂಶೋಧನೆ ಹಾಗೂ ಅರಿವಿನ ಕಾರ್ಯಕ್ರಮಗಳ ಮೂಲಕ ಅನೇಕರ ಬಾಳಿಗೆ ಇವರು ಬೆಳಕಾಗಿದ್ದಾರೆ.

**ಈ ವರ್ಷದ ಪದ್ಮ ಪುರಸ್ಕಾರಕ್ಕೆ ಭಾಜನರಾದ ಎಲ್ಲ ಗಣ್ಯರಿಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.**

**ಯಲ್ಲಾಲಿಂಗ ಕೊಪ್ಪದ**


## ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಿಂದ ರಾಜ್ಯದ ಸ್ತಬ್ಧಚಿತ್ರ ವೀಕ್ಷಣೆ



ಜನವರಿ 26ರ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ನವದೆಹಲಿಯ 'ಕರ್ತವ್ಯ ಪಥ'ದಲ್ಲಿ ಪಥಸಂಚಲನದಲ್ಲಿ ಭಾಗವಹಿಸಿದ 'ನಾರಿ ಶಕ್ತಿ' ಸ್ತಬ್ಧಚಿತ್ರದ ಅಂತಿಮ ಸಿದ್ಧತೆಗಳನ್ನು ರಕ್ಷಣಾ ಮಂತ್ರಾಲಯದ ರಾಷ್ಟ್ರೀಯ ರಂಗಶಾಲಾ ಶಿಬಿರದಲ್ಲಿ ನಡೆಸಲಾಗಿತ್ತು. ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಎಂ. ಇಮ್‌ಕೊಂಗ್ಲ ಜಮೀರ್ ಅವರು ಬುಧವಾರ ಜ.25ರಂದು ಭೇಟಿ ನೀಡಿ, ಸ್ತಬ್ಧಚಿತ್ರ ವೀಕ್ಷಿಸಿ,ಮೆಚ್ಚುಗೆ ವ್ಯಕ್ತಪಡಿಸಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರು ಹಾಗೂ ರಾಜ್ಯದ ಸ್ತಬ್ಧಚಿತ್ರದ ನೋಡಲ್ ಅಧಿಕಾರಿಗಳೂ ಆದ ಸಿ.ಆರ್. ನವೀನ್ ಅವರು ರಾಜ್ಯ ಸ್ತಬ್ಧಚಿತ್ರದ ಕುರಿತ ಮಾಹಿತಿ ವಿವರ ನೀಡಿದರು. ಈ ಸಂದರ್ಭ ಕರ್ನಾಟಕ ಭವನದ ಅಪರ ನಿವಾಸಿ ಆಯುಕ್ತರಾದ ಡಾ. ಸಿಮಿ ಮರಿಯಮ್ ಜಾರ್ಜ್, ಸಹಾಯಕ ನಿವಾಸಿ ಆಯುಕ್ತ ಶಂಭುಲಿಂಗಪ್ಪ, ಸಹಾಯಕ ಸಮನ್ವಯಾಧಿಕಾರಿ ಪ್ರದೀಪ, ವೈದ್ಯ ಡಾ. ಕಾರ್ತಿಕ್, ಕಲಾ ನಿರ್ದೇಶಕ ಶಶಿಧರ ಅಡಪ, ಪ್ರತಿರೂಪಿ ಸಂಸ್ಥೆಯ ರಾಜಕುಮಾರ್, ಕಲಾವಿದ ಅಕ್ಮಲ್ ಪಾಷಾ ಹಾಗೂ ವಿನೊದ ಅವರು ಉಪಸ್ಥಿತರಿದ್ದರು.

ವರದಿ ಕೃಪೆ : **ಕರ್ನಾಟಕ ವಾರ್ತೆ**


## ಅಭಿನಂದನೆ



ಶ್ರೀ ಡಾ. ಸಿ.ಎನ್. ಮಂಜುನಾಥ್




ಶ್ರೀ ಜಿ. ಕೃಷ್ಣಪ್ಪ



ಶ್ರೀ ಎಸ್. ಷಡಕ್ಷರಿ

"ರಾಜ್ಯದ ಹಂಪಿ ಕನ್ನಡ ವಿಶ್ವವಿದ್ಯಾಲಯ ನೀಡುವ ಪ್ರತಿಷ್ಠಿತ ನಾಡೋಜ ಗೌರವಕ್ಕೆ ಪಾತ್ರರಾಗಿರುವ ನಾಡಿನ ಹೆಮ್ಮೆಯ ಸಾಧಕರಾದ ಶ್ರೀ ಡಾ.ಸಿ. ಎನ್. ಮಂಜುನಾಥ್, ಶ್ರೀ ಜಿ.ಕೃಷ್ಣಪ್ಪ, ಶ್ರೀ ಎಸ್. ಷಡಕ್ಷರಿಯವರಿಗೆ ಸಮಸ್ತ ಹೊರನಾಡ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘದಿಂದ ಹಾರ್ದಿಕ ಅಭಿನಂದನೆಗಳು"

# ನಡೆ ನಿಲ್ಲಿಸಿದ ನಡೆದಾಡುವ ದೇವರು ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ ಭಕ್ತಿಪೂರ್ವಕ ಶ್ರದ್ಧಾಂಜಲಿ







ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 4.01.2023 ರಂದು ಆಯೋಜಿಸಿದ್ದ ಬಸವ ಪ್ರೇಮಿ, ನಿಸರ್ಗ ಪ್ರೇಮಿ, ಮಾನವ ಪ್ರೇಮಿ, ಸರಳ ಸಜ್ಜನ ಸಾಕಾರ ಮೂರ್ತಿಯಾದ ವಿಜಯಪುರದ ಜ್ಞಾನ ಯೋಗಾಶ್ರಮದ ಜ್ಞಾನಯೋಗಿ ಶಿವೈಕ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಶ್ರದ್ಧಾಂಜಲಿ ಸಭೆಯಲ್ಲಿ, ದೆಹಲಿ ಕನ್ನಡಿಗರು ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ದೀಪ ಬೆಳಗಿಸುವ ಮೂಲಕ ಪೂಜೆ, ಗೌರವ ಸಲ್ಲಿಸಿ ಅಗಲಿದ ಹಿರಿಯ ಚೇತನ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು (ನುಡಿ ನಮನವನ್ನು) ಅರ್ಪಿಸಿದರು.

ಕೇಂದ್ರ ಸರ್ಕಾರದ ಇಂಧನ, ರಸಾಯನಿಕ ಹಾಗು ರಸಗೊಬ್ಬರ ಖಾತೆ ಸಚಿವರಾದ ಮಾನ್ಯ ಶ್ರೀ ಭಗವಂತ ಖೂಬಾ ಅವರ ಆಪ್ತ ಕಾರ್ಯದರ್ಶಿ ಶ್ರೀ ಅಮರೇಶ್ವರ ಪಾಟೀಲ, ಐಆರ್‌ಎಸ್ ಅವರು ಮಾತನಾಡುತ್ತಾ "ಬಾರದು ಬಪ್ಪದು ಬಪ್ಪದು ತಪ್ಪದು" ಎನ್ನುವಂತೆ ಹುಟ್ಟು ಸಾವು ಖಂಡಿತ, ಶ್ರೀಗಳು ತಮ್ಮ ಹುಟ್ಟು ಸಾವಿನ ನಡುವೆ ಅನೇಕ ಸಾರ್ಥಕ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ನಡೆದಾಡುವ ದೇವರಂತೆ ಮಾನವ ಕುಲಕೋಟಿಗೆ ತಮ್ಮ ಪ್ರವಚನ ಮೂಲಕ ಭಕ್ತರ ಮನಸ್ಸನ್ನು ಮುಗ್ಧಗೊಳಿಸಿದವರು. ಅಲ್ಲಮಪ್ರಭುವಿನ ವಚನ ಸಾರದಂತೆ ತಮ್ಮ ಜೀವನವನ್ನು ನಡೆಸಿದರು ಎಂದರು.

ನಿವೃತ್ತ ಹಿರಿಯ ಪೋಲಿಸ್ ಅಧಿಕಾರಿಗಳಾದ ಹಿರಿಯ ದೆಹಲಿ ಕನ್ನಡಿಗ ಶ್ರೀ ಬಸವರಾಜ ಕಲ್ಲೂರು ಅವರು ಮಾತನಾಡಿ ಗುರುಗಳು ನನ್ನದು ತನ್ನದು ಎಂದವರಲ್ಲ, ಎಲ್ಲರಿಗೂ ಮಮಕಾರ ತೋರಿದ ಮಹಾ ಪುರುಷರು, ಸರ್ವ ಜನರಿಂದ ಪ್ರೀತಿ ವಿಶ್ವಾಸದ ಆಶ್ರಯದಾತರಾಗಿ ಬೆಳೆದವರು ಅವರು ಎಂದು ವಿಶ್ಲೇಷಿಸಿದರು. ಡಿಟಿಯುನ ಪ್ರೊ ಡಾ. ರಂಗನಾಥ ಸಿಂಗಾರಿಯವರು ಮಾತನಾಡಿ ತಾವು ಹುಟ್ಟಿದ್ದು ವಿಜಯಪುರದಲ್ಲಿ ಅಲ್ಲಿನ ಸ್ವಾಮೀಜಿಯವರ ಆಶ್ರಮದಲ್ಲಿ ಆಡಿ ಬೆಳೆದವನು, ಅವರ ಮಾರ್ಗದರ್ಶನದಿಂದ ಜೀವನದಲ್ಲಿ ಈ ಮಟ್ಟಕ್ಕೆ ಏರಲು ಸಾಧ್ಯವಾಯಿತು, ಶ್ರೀಗಳ ಆಶೀರ್ವಾದ ಸದಾ ಎಲ್ಲಾ ಭಕ್ತರ ಮೇಲಿದೆ, ಅವರಂಥ ಸರಳ ಸಜ್ಜನ ಪುರುಷರು ನನ್ನ ಜಿಲ್ಲೆಯಲ್ಲಿ ಜನ್ಮ ತಾಳಿದ್ದು ನಮ್ಮ ಭಾಗ್ಯವೆಂದು ತಿಳಿಸಿದರು.

ನವದೆಹಲಿಯ ಮುರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯ ನಿರ್ದೇಶಕರಾದ ಡಾ. ಈಶ್ವರ ವೀ. ಬಸವರಡ್ಡಿಯವರು ನುಡಿ ನಮನ ಅರ್ಪಿಸುತ್ತಾ ಶ್ರೀಯುತರು ತಮ್ಮ ಗುರುಗಳ ಮಾರ್ಗದರ್ಶನದಂತೆ ಆಶ್ರಮದ ಚಟುವಟಿಕೆಗಳನ್ನು ಪ್ರಾರಂಭಿಸಿದರು. ತತ್ವಶಾಸ್ತ್ರದಲ್ಲಿ ಪದವೀಧರರಾದ ಅವರಿಗೆ ಯೋಗದ ಬಗ್ಗೆ ಅಪಾರವಾದ ಆಸಕ್ತಿ ಇತ್ತು. ಭಾರತ ಸರ್ಕಾರ ಇವರಿಗೆ ನೀಡಲು ನಿರ್ಧರಿಸಿದ ನಾಗರಿಕ ಗೌರವ ಪದ್ಮಶ್ರೀ ಪ್ರಶಸ್ತಿಯನ್ನು, ಸೇರಿದಂತೆ ಕರ್ನಾಟಕ ವಿಶ್ವವಿದ್ಯಾಲಯವು ನೀಡಿದ ಗೌರವ ಡಾಕ್ಟರೇಟ್ ಇಂಥ ಅನೇಕ ಪ್ರಶಸ್ತಿಗಳನ್ನು ಸ್ವೀಕರಿಸಲು ವಿನಮ್ರತೆಯಿಂದ ನಿರಾಕರಿಸಿದ್ದರು ಎಂದು ತಮ್ಮ ಮನದಾಳದ ಮಾತನಾಡಿದರು.ಅವರು ಬದುಕಿದ್ದಷ್ಟು ಸಮಯ ಸಮಾಜಕ್ಕೆ ನೀಡಿರುವ ತತ್ವ ನುಡಿಗಳನ್ನು ಈ ಸಂದರ್ಭದಲ್ಲಿ ನೆನೆಯುತ್ತ ಪರಿಸರವನ್ನು ಪ್ರೀತಿಸಬೇಕು ನಿಸರ್ಗದ ಜೊತೆ ನಾವು ಕೂಡ ಹೆಚ್ಚು ಬಯಸದೆ ಇನ್ನೊಬ್ಬರಿಗೆ ನೋವು ಮಾಡದಂತೆ ಮನುಜರು ಕೂಡ ಹಕ್ಕಿ ಪಕ್ಷಿಗಳಂತೆ ಸಂತೋಷವಾಗಿ ಬದುಕಲು ಸಾಧ್ಯವಿದೆ ಎಂದು ಹೇಳಿ ನುಡಿದಂತೆಯೇ ತಾವು ಕೂಡ ಬದುಕಿ ತೋರಿಸಿದ ವ್ಯಕ್ತಿತ್ವದ ಅವರದು.ಜೊತೆಗೆ ಮನುಷ್ಯರೆಲ್ಲರೂ ಮನುಷ್ಯತ್ವಕ್ಕೆ ಪ್ರಾಮುಖ್ಯತೆಯನ್ನು ನೀಡುವುದರ ಮೂಲಕ ಅವರಂತೆಯೇ ಬದುಕಲು ಪ್ರಯತ್ನಿಸಿದರೆ ನಿಸರ್ಗದಲ್ಲಿ ಎಷ್ಟೊಂದು ಪ್ರಸನ್ನತೆ ಇರುತ್ತದೆ, ಹಕ್ಕಿ ಹಾರ್ತಾವಾ ಹೂವು ಅರಳತಾವಾ ಎಂಬ ಹಾಗೆ ನಾವು ಬದುಕಿ ಹೋಗಬೇಕು ಎಂದರು.

ಮತ್ತೊಬ್ಬ ದೆಹಲಿ ಕನ್ನಡಿಗ ಶ್ರೀ ಶ್ರೀಕಾಂತ್ ಚೌಕೀಮಠ್‌ರವರು ಮಾತನಾಡಿ ಡಾ. ಬಸವರಡ್ಡಿ ಯವರ ಮಾತುಗಳನ್ನು ಪುಷ್ಠಿಸುತ್ತಾ, ಈ ಹಿಂದೆ ತಾವು ಮೈಸೂರಿನಲ್ಲಿ ಶ್ರೀಗಳನ್ನು ಭೇಟಿ ಮಾಡಿದ ಸಂದರ್ಭವನ್ನು ನೆನಪಿಸಿಕೊಂಡರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಸಂಪಾದಕರು ಅಭಿಮತ ಪತ್ರಿಕೆಯ ಮುಖ್ಯ ಸಂಪಾದಕರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರು ಮಾತಾಡುತ್ತಾ ಶ್ರೀಗಳು ಜಿಲ್ಲೆ ಮಾತ್ರವಲ್ಲದೆ ರಾಜ್ಯ, ರಾಷ್ಟ್ರ ಹಾಗು ವಿದೇಶ ಪ್ರಯಾಣ ಮಾಡಿ ಪ್ರವಚನಗಳ ಮೂಲಕ ಜನರಿಗೆ ಜೀವನದ ಬಗ್ಗೆ ಮಾಹಿತಿ ನೀಡಿದ ಪುಣ್ಯ ಪುರುಷರು ಎಂದು ಹೇಳಿದರು.

ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಖಜಾಂಚಿಗಳಾದ ಶ್ರೀ ರಾಧಾಕೃಷ್ಣ ಸಮಿತಿ ಸದಸ್ಯರು ಮತ್ತು ಹಿರಿಯ ದೆಹಲಿ ಕನ್ನಡಿಗರು, ಸಂಘದ ಸದಸ್ಯರು ಇನ್ನೂ ಅನೇಕ ಗಣ್ಯರು ಉಪಸ್ಥಿತರಿದ್ದರು. ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಜೊತೆಯಲ್ಲಿ ಇದ್ದ ತಮ್ಮ ಒಡನಾಟ ಹಾಗು ಅವರ ಸರಳತೆಯನ್ನು ನೋಡಿರುವ ಕೆಲವು ಮಾತುಗಳನ್ನು ಎಲ್ಲರೂ ಹಂಚಿಕೊಂಡರು.

ಮತ್ತೊರ್ವ ಹಿರಿಯ ದೆಹಲಿ ಕನ್ನಡಿಗ ಶ್ರೀ ವೈಜಿನಾಥ ವಿ. ಬಿರಾದಾರರವರು ಮಾತನಾಡಿ ಶ್ರೀಗಳು ನಿಸರ್ಗ ಪ್ರೇಮಿ ಮಾನವ ಪ್ರೇಮಿಯಾಗಿದ್ದರು. ಜಗತ್ತು ದೇವ ನಿರ್ಮಿತವಾಗಿದೆ, ಮಾನವ ನಿರ್ಮಿತವಲ್ಲ. ನಿಸರ್ಗದ ಜೊತೆಗೆ ಆನಂದ ಪಡೆಯಬೇಕು ದುರಾಸೆ ಇರಬಾರದು ಎಂಬ ಮಂತ್ರವನ್ನು ಭಕ್ತರಿಗೆ ಪಠಿಸುತಿದ್ದರು. ಮಾಜಿ ಕೇಂದ್ರ ಸಚಿವ ಮಾನ್ಯ ಶ್ರೀ ರಮೇಶ್ ಸಿ ಜಿಗಜಿಣಗಿ ಅವರ ಆಪ್ತ ಸಲಹೆಗಾರನಾಗಿ ಸೇವೆ ಮಾಡುವ ಸಂದರ್ಭದಲ್ಲಿ ಹಲವಾರು ಬಾರಿ ಶ್ರೀಗಳ ದರ್ಶನ ಪಡೆಯುವ ಭಾಗ್ಯ ನನಗೆ ಒದಗಿತ್ತು ಎಂದು ತಿಳಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರು ಮಾತನಾಡುತ್ತಾ ನಡೆದಾಡುವ ದೇವರೆಂದೇ ಹೆಸರಾದ ಶ್ರೀಗಳು ವಿಧಿವಶರಾಗಿದ್ದಾರೆ ಎಂದು ತಿಳಿದು ದುಃಖವಾಯಿತು. ಶ್ರೀಗಳು ನಮ್ಮೊಂದಿಗೆ ಇರದೇ ಇದ್ದರೂ ಅವರ ಪ್ರವಚನ ಹಿತನುಡಿ ಜನರ ಬದುಕಿಗೆ ದಾರಿದೀಪವಾಗಿವೆ ಎಂದರು. ಸಂಘದ ಅಮೃತ ಮಹೋತ್ಸವದ ಶುಭ ಸಂದರ್ಭದಲ್ಲಿ ತಾಲ್ಕಟೋರಾ ಸ್ಟೇಡಿಯಂನಲ್ಲಿ ಅವರ ದಿವ್ಯ ಸಾನಿಧ್ಯದಲ್ಲಿ ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂಬ ಇದ್ದ ತಮ್ಮ ಮನದಾಸೆ ಈಡೇರಲಿಲ್ಲ ಎಂಬ ದುಃಖವನ್ನು ವ್ಯಕ್ತಪಡಿಸಿದರು. ಕೊನೆಯಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಕಾರ್ಯಕ್ರಮದಲ್ಲಿ ಭಾಗಿಯಾದ ಎಲ್ಲರಿಗೂ ಧನ್ಯವಾದಗಳನ್ನು ಹೇಳುತ್ತಾ ಪಂಚಭೂತಗಳಲ್ಲಿ ಲೀನರಾದ ಶತಮಾನದ ಸಂತ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ ಎಂದು ತಿಳಿಸಿದರು.

**ವಿ.ವಿ. ಬಿರಾದಾರ**
ಕಾರ್ಯದರ್ಶಿ ಸಾಮಾಜಿಕ ಸುಧಾರಣಾ
ಪ್ರಗತಿಶೀಲ ಸಂಸ್ಥೆ, ನವದೆಹಲಿ

# ದೆಹಲಿ ಕರ್ನಾಟಕ ಸಂಘದಲ್ಲಿ ಮೊಟ್ಟ ಮೊದಲ ಬಾರಿಗೆ ಯಶಸ್ವಿ 'ಉದ್ಯೋಗ ಮೇಳ' ಆಯೋಜನೆ






ದೆಹಲಿ ಕರ್ನಾಟಕ ಸಂಘವು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕರ್ನಾಟಕ ರಾಜ್ಯದ ನೆಲ, ಜಲ, ನಾಡು ನುಡಿ ಸಾಹಿತ್ಯ ಸಂಸ್ಕೃತಿಯ ರಾಯಭಾರಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಸಂಘವು ಇತ್ತೀಚಿನ ದಿನಗಳಲ್ಲಿ ವಿಶ್ವದಲ್ಲೆ ಅತಿ ಹೆಚ್ಚು ಕನ್ನಡ ಪರ ಚಟುವಟಿಕೆಗಳ ಕಾರ್ಯ ನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳ ಸಾಲಿನಲ್ಲಿ ಅಗ್ರಸ್ಥಾನದಲ್ಲಿದೆ.

ದೆಹಲಿ ಕರ್ನಾಟಕ ಸಂಘವು 75ನೇ ವರ್ಷದ ಅಮೃತ ಮಹೋತ್ಸವ ಸಂಭ್ರಮಾಚರಣೆ ಆಚರಿಸಿಕೊಳ್ಳುತ್ತಿರುವ ಶುಭ ಸಂದರ್ಭದಲ್ಲಿ ಸಂಘದ ಸದಸ್ಯರ ಮಕ್ಕಳು ಹಾಗೂ ದೆಹಲಿ ಕನ್ನಡಿಗರಿಗೋಸ್ಕರ ಕರ್ನಾಟಕ ಸರ್ಕಾರದ ಕೌಶಲ್ಯ ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಉದ್ಯೋಗ ಆಕಾಂಕ್ಷಿಗಳಿಗಾಗಿ ದೇಶದ ಹತ್ತು ಪ್ರತಿಷ್ಠಿತ ಕಂಪನಿಗಳ ಜೊತೆಯಲ್ಲಿ ಆನ್‌ಲೈನ್ ಮೂಲಕ ದಿನಾಂಕ 12.01.2023 ರಂದು 'ಉದ್ಯೋಗ ಮೇಳ'ವನ್ನು ಆಯೋಜಿಸಿತ್ತು.

ಮೊದಲಿಗೆ, ಕೌಶಲ್ಯ ಅಭಿವೃದ್ಧಿ ನಿಗಮ ನೀಡಿದ ಒಂದು ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಉದ್ಯೋಗ ಆಕಾಂಕ್ಷಿಗಳನ್ನು ನೋಂದಣಿ ಮಾಡಿಸುವ ಮೂಲಕ ವಿದ್ಯಾರ್ಹತೆಗೆ ಅನುಕೂಲಕರವಾಗುವ ಕಂಪನಿಗಳನ್ನು ಉದ್ಯೋಗ ಮೇಳದಲ್ಲಿ ಭಾಗವಹಿಸಲು ಮನವಿ ಮಾಡಿಕೊಂಡಿದ್ದೆವು, ಈ ನಮ್ಮ ಮನವಿಗೆ ಸಹಕರಿಸಿದ ಕೌಶಲ್ಯ ಅಭಿವೃದ್ಧಿ ನಿಗಮದ ನಿರ್ದೇಶಕರಾದ ಶ್ರೀ ಅಶ್ವಿನ್ ಡಿ. ಗೌಡ ನೀಡಿದ ಸಹಕಾರ ಜೊತೆಗೆ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ನೇತೃತ್ವದಲ್ಲಿ ಮೊಟ್ಟ ಮೊದಲ ಬಾರಿಗೆ ಉದ್ಯೋಗ ಮೇಳವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಏರ್ಪಡಿಸಲಾಗಿತ್ತು.

ಮೊದಲಿಗೆ ಪ್ರಸಿದ್ಧ 10 ಕಂಪನಿಗಳ ಅಧಿಕಾರಿಗಳು/ ಸಂದರ್ಶಕರು ಮತ್ತು 50 ಕ್ಕೂ ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದ ಉದ್ಯೋಗ ಆಕಾಂಕ್ಷಿಗಳಿಗೆ ಹಾಗೂ ಮುಖ್ಯ ಅತಿಥಿಗಳಿಗೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಸಂತೋಷ ಜೆ ಸ್ವಾಗತ ಕೋರಿದರು.

ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ದೆಹಲಿ ಕರ್ನಾಟಕ ಸಂಘದಲ್ಲಿ ಮೊದಲ ಬಾರಿಗೆ ಉದ್ಯೋಗ ಮೇಳವನ್ನು ಆಯೋಜಿಸಿದ್ದೇವೆ, ಆಕಾಂಕ್ಷಿಗಳು ಇದರ ಸಂಪೂರ್ಣ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ತಿಳಿಸಿದರು. ಮುಂದಿನ ದಿನಗಳಲ್ಲಿ ನೂರಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಭಾಗವಹಿಸಿದ್ದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿಯೇ ಇನ್ನೂ ಅನೇಕ ಪ್ರಸಿದ್ಧ ಕಂಪನಿಗಳನ್ನು ಕರೆಯಿಸಿ ಉದ್ಯೋಗ ಮೇಳವನ್ನು ಆಯೋಜಿಸುವುದಾಗಿ ಹೇಳಿದರು.

ಕಾರ್ಯಕ್ರಮ ಆಯೋಜನೆಯ ಮುಖ್ಯ ರೂವಾರಿ ಹಾಗೂ ಮುಖ್ಯ ಅತಿಥಿಗಳಾದ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ನಿರ್ದೇಶಕರಾದ ಶ್ರೀ ಅಶ್ವಿನ್ ಡಿ. ಗೌಡ ಅವರು ಮಾತನಾಡಿ ದೆಹಲಿಯಲ್ಲಿ ಇರುವ ಕನ್ನಡಿಗರಿಗೆ ಅನುಕೂಲಕರವಾಗಲೆಂದು ದೆಹಲಿ ಕರ್ನಾಟಕ ಸಂಘದಲ್ಲಿ ಉದ್ಯೋಗ ಮೇಳ ಆಯೋಜನೆಯನ್ನು ಮಾಡಲು ತಮ್ಮ ಬಳಿ ಮನವಿ ಮಾಡಿಕೊಂಡ ಅಧ್ಯಕ್ಷರಾದ ಸಿ.ಎಂ. ನಾಗರಾಜ ಮತ್ತು ಅಧಿಕಾರಿ ವರ್ಗದೊಂದಿಗೆ ಸಂಪರ್ಕದಲ್ಲಿದ್ದು ಕಾರ್ಯಕ್ರಮವನ್ನು ಆಯೋಜಿಸಲು ಶ್ರಮಿಸಿದ ಸಂತೋಷ ಜೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ರಾಜ್ಯದಿಂದ ಹೊರತುಪಡಿಸಿ ಮೊಟ್ಟ ಮೊದಲ ಬಾರಿಗೆ ದೆಹಲಿಯಲ್ಲಿ ಉದ್ಯೋಗ ಮೇಳವನ್ನು ಆಯೋಜಿಸುತ್ತಿರುವುದು ತುಂಬಾ ಖುಷಿ ತಂದಿದೆ ಇದರ ಸದುಪಯೋಗವನ್ನು ಉದ್ಯೋಗ ಆಕಾಂಕ್ಷಿಗಳು, ವಿಶೇಷವಾಗಿ ನಮ್ಮ ಕನ್ನಡಿಗರ ಮಕ್ಕಳು ಪಡೆದುಕೊಳ್ಳಬೇಕಾಗಿ ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಆರ್. ರೇಣುಕುಮಾರ್ ಅವರು ಉದ್ಯೋಗ ಮೇಳದಲ್ಲಿ ಭಾಗವಹಿಸಿರುವ ಎಲ್ಲ ಉದ್ಯೋಗ ಆಕಾಂಕ್ಷಿಗಳು ಸಂಸ್ಥೆಗಳ ಅಧಿಕಾರಿ ವರ್ಗ ಮತ್ತು ಆಯೋಜನೆಯಲ್ಲಿ ಸಹಕರಿಸಿದ ಕರ್ನಾಟಕ ಸರ್ಕಾರದ ಕೌಶಲ್ಯ ಅಭಿವೃದ್ಧಿ ನಿಗಮದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಂಘದ ಸಮಿತಿಯ ಎಲ್ಲ ಸದಸ್ಯರನ್ನು ವಂದಿಸಿದರು.

ಮಧ್ಯಾಹ್ನ 3 ಗಂಟೆಯಿಂದ ಸಂಜೆ 6 ಗಂಟೆವರೆಗೆ ನಡೆದ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಂಪನಿಗಳು ಹಾಗು 50ಕ್ಕೂ ಹೆಚ್ಚು ಉದ್ಯೋಗ ಆಕಾಂಕ್ಷಿಗಳು ಆನ್‌ಲೈನ್ ಪರೀಕ್ಷೆ ಮತ್ತು ಸಂದರ್ಶನ ನಡೆಸುವ ಮೂಲಕ ಪಾಲ್ಗೊಂಡು ಯಶಸ್ವಿಗೊಳಿಸಿದರು.

ಈ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾದ ಕೆ.ಎಸ್. ಮೂರ್ತಿ ಹಾಗು ಸಂಘದ ಸದಸ್ಯರು, ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು. ಉದ್ಯೋಗ ಮೇಳದಲ್ಲಿ ಆಯ್ಕೆಯಾದ ಕನ್ನಡಿಗರ ಮಕ್ಕಳಿಗೆ ಅಭಿನಂದನೆಗಳು.

***ಸಂತೋಷ ಜೆ***

## ಶ್ರದ್ಧಾಂಜಲಿ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಟಿ.ಎಂ. ಶಿರೂರು ಅವರು ದಿನಾಂಕ 26.01.2023 ರಂದು ನಿಧನರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. 2014ರಲ್ಲಿ ಇವರಿಗೆ ಸಂಘದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



ದೆಹಲಿಯ ಮಧ್ವ ಸಂಘ ಹಾಗು ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಶ್ರೀ ಕೆ.ಎಸ್. ನಾರಾಯಣ ಆಚಾರ್ಯ ಅವರು ದಿನಾಂಕ 09.01.2023 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ.

ಅಗಲಿದ ಈ ಇಬ್ಬರು ಹಿರಿಯ ಶ್ರೀಯುತರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬಕ್ಕೆ ಅವರ ಅಗಲಿಕೆಯ ದು:ಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ.

**ಸಮಸ್ತ ದೆಹಲಿ ಕನ್ನಡಿಗರಿಂದ ಭಾವಪೂರ್ಣ ಶ್ರದ್ಧಾಂಜಲಿ**

## ಟಿ.ಎಂ. ಶಿರೂರು ಅವರ ನೆನಪುಗಳು

ಶ್ರೀ ಟಿ.ಎಂ. ಶಿರೂರ, ಕನ್ನಡ ವಾರ್ತಾ ಇಲಾಖೆಯ ನಿರ್ದೇಶಕರಾಗಿ ಕನ್ನಡದ ನೆಲ, ಜಲ, ಭಾಷೆ, ಸಾಹಿತ್ಯ ಸಂಸ್ಕೃತಿ ಸಂಸ್ಕಾರ ಕಲೆಯನ್ನು ಉಳಿಸಿ ಬೆಳೆಸಿದ ಒಬ್ಬ ಮಹಾಶಕ್ತಿಯಾಗಿದ್ದರು. ಅವರ ಮೃತ್ಯುವಿನ ಸುದ್ದಿ ಕೇಳಿ ಅತೀವ ದುಃಖವಾಯಿತು. ಎಲ್ಲರನ್ನು ನಕ್ಕು ನಗಿಸುವ ಮೃದು ಸ್ವಭಾವದವರು ಆಗಿದ್ದರು. ದೆಹಲಿಯ ಕರ್ನಾಟಕ ಭವನದಲ್ಲಿ ಅನೇಕ ಕನ್ನಡಪರ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಅವರು ಸರಳ ಸಜ್ಜನ ಅಧಿಕಾರಿಗಳು ಜನರ ಸ್ಪಂದನೆಗೆ ಅವರ ಎತ್ತಿದ ಕೈಯಾಗಿತ್ತು. ಅವರು ಯಾರಿಗೂ ಭೇದಭಾವ ಮಾಡದೆ ಸಮಾನವಾಗಿ ಕಾಣುವಂತಹ ಹತ್ತಾರು ಜನರಿಗೆ ಸಹಾಯ ಮಾಡುವ ಪ್ರವೃತ್ತಿಯಾಗಿತ್ತು. ಅವರ ಮಾತು ಕೇಳಿಸಿಕೊಳ್ಳುತ್ತಾ ಹೋದರೆ ಇನ್ನೂ ಕೇಳಬೇಕು ಎಂದು ಪ್ರೇಕ್ಷಕರು ಒತ್ತಾಯಿಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಅವರನ್ನು ಭೇಟಿ ಮಾಡಿದ ನೆನಪು ಅವರ ಆಚಾರ ವಿಚಾರ ಶ್ರದ್ಧೆ ಭಕ್ತಿ ಸಂಬಂಧಗಳು ಮರೆಯಲು ಸಾಧ್ಯವಿಲ್ಲ. ಕನ್ನಡಿಗರ ಹಿತಕ್ಕಾಗಿ ಕನ್ನಡಿಗರ ಸ್ನೇಹಕ್ಕಾಗಿ ತಮ್ಮ ಜೀವನವನ್ನು ಕಳೆದ ಒಬ್ಬ ಸಂತ. ಇಂಥ ಮಹಾನ್ ಕನ್ನಡಿಗರನ್ನು ಕಳೆದುಕೊಂಡಿದ್ದು ನಮ್ಮ ದೇಹಲಿ ಕನ್ನಡಿಗರಿಗೆ ಅಪಾರ ನಷ್ಟ ಉಂಟಾಗಿದೆ. ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ ಅವರ ಕುಟುಂಬ ಸದಸ್ಯರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ

**ವಿ.ವಿ. ಬಿರಾದಾರ,** ನವದೆಹಲಿ

# ದೆಹಲಿ ಒಕ್ಕಲಿಗ ಗೌಡ ಸಂಘದಿಂದ ಸಂಭ್ರಮ ಸಡಗರದ 'ಸಂಕ್ರಾತಿ ಮಿಲನ ಕಾರ್ಯಕ್ರಮ'

ದೆಹಲಿ ಒಕ್ಕಲಿಗ ಗೌಡ ಸಂಘದ (ಡಿವಿಜಿಎಸ್) ವತಿಯಿಂದ ದಿನಾಂಕ 29.01.2023ರಂದು 'ಸಂಕ್ರಾತಿ ಮಿಲನ–2023' ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಹಕಾರದೊಂದಿಗೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಪ್ರಾರಂಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ, ಪೀಠಾಧ್ಯಕ್ಷರು ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ, ಪೂಜ್ಯರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಆದಿಚುಂಚನಗಿರಿ ಶಾಖಾಮಠ, ಮೈಸೂರು, ಮತ್ತು ಪೂಜ್ಯರಾದ ಶ್ರೀ ಆನಂದ ಚೈತನ್ಯನಾಥ ಸ್ವಾಮೀಜಿ, ಆದಿಚುಂಚನಗಿರಿ ಶಾಖಾಮಠ, ನವದೆಹಲಿ ಇವರುಗಳಿಗೆ ಮಂಗಳ ವಾದ್ಯಗಳೊಂದಿಗೆ ಸಮುದಾಯದ ಮಹಿಳೆಯರಿಂದ ಪೂರ್ಣಕುಂಭ ಸ್ವಾಗತವನ್ನು ನೀಡಲಾಯಿತು. ಶ್ರೀಮತಿ ಕುಮಾರಿ ಮತ್ತು ಶ್ರೀ ಅನಂತ ಗೌಡ ದಂಪತಿಗಳು ಪರಮಪೂಜ್ಯರಿಗೆ ಪಾದಪೂಜೆ ಮಾಡಿದರು.



ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ನಾಡಗೀತೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಪರಮಪೂಜ್ಯರ ದಿವ್ಯಸಾನಿಧ್ಯದಲ್ಲಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಶ್ರೀ ಆನಂದ ಚೈತನ್ಯನಾಥ ಸ್ವಾಮೀಜಿ, ಶ್ರೀ ವಿನಯ್ ದೀಪ್ ಆರ್, ಆಯುಕ್ತರು, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಶ್ರೀ ಎನ್.ಎ. ಮಾಧವ, ಸಂಸ್ಥಾಪಕ ಅಧ್ಯಕ್ಷರು, ಡಿ.ವಿ.ಜಿ.ಎಸ್ ಹಾಗು ಕಾರ್ಯದರ್ಶಿಗಳಾದ ಶ್ರೀ ಪ್ರಶಾಂತ್ ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಿವಿಜಿಎಸ್ ಅಧ್ಯಕ್ಷರಾದ ಶ್ರೀ ಅನಂತ ರಾಮ ಅರಳಿಯವರು ಮಾತನಾಡಿ ಸಂಕ್ರಾಂತಿ ಮಿಲನ ಕಾರ್ಯಕ್ರಮ ಆಯೋಜನೆಯ ಹಿನ್ನೆಲೆಯಲ್ಲಿ ತಿಳಿಸಿದರು. ದೆಹಲಿ ಒಕ್ಕಲಿಗ ಗೌಡ ಸಂಘವು ಶ್ರೀ ಎನ್.ಎ. ಮಾಧವ ಅವರಿಗೆ 'ದೆಹಲಿ ವಿಶಿಷ್ಟ ಒಕ್ಕಲಿಗ' ಪ್ರಶಸ್ತಿಯನ್ನು ಹಾಗೂ ಶ್ರೀ ವಿನಯ್ ದೀಪ್ ಆರ್, ಅವರನ್ನು ವಿಶೇಷ ಸನ್ಮಾನಿತರನ್ನಾಗಿ ಗೌರವಿಸಿ ಅಭಿನಂದಿಸಲಾಯಿತು. ಸನ್ಮಾನಿತರು ಅಭಿನಂದನೆ ಸ್ವೀಕರಿಸಿ ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದರು.

ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು ಸಭಾಂಗಣದಲ್ಲಿ ನೆರೆದಿದ್ದ ಎಲ್ಲಾ ದೆಹಲಿ ಕನ್ನಡಿಗರಿಗೆ ಮತ್ತು ಭಕ್ತವೃಂದದವರಿಗೆ ಆಶೀರ್ವಚನ ನೀಡುತ್ತಾ, ಸಮಾಜವನ್ನು ಮಾನವನ ದೇಹಕ್ಕೆ ಹೋಲಿಸುತ್ತಾ, ಶರೀರದಲ್ಲಿ ಪ್ರತಿಯೊಂದು ಅಂಗವು ಶ್ರೇಷ್ಠ. ಯಾವ ರೀತಿ ದೇಹದ ಯಾವುದೇ ಅಂಗವು ಊನವಾದರೆ ಇಡೀ ದೇಹಕ್ಕೆ ನಷ್ಟವಾಗುತ್ತದೆಯೋ ಹಾಗೆಯೇ ಯಾವುದೇ ಒಂದು ಸಮುದಾಯ ತೊಂದರೆಗಗೀಡಾದರೆ ಸಮಾಜಕ್ಕೂ ಕೂಡ ನಷ್ಟ. ಸಮಾಜದ ಎಲ್ಲ ಜನಾಂಗದ ಜನರನ್ನು ಸಮಾನವಾಗಿ ನಡೆಸಿಕೊಂಡರೆ ಸಮಾಜವು ಕೂಡ ಆರೋಗ್ಯಕರವಾಗಿರುತ್ತದೆ ಎಂದು ತಿಳಿಸಿದರು. ಸಮಾಜದ ಯಾವುದೇ ವ್ಯಕ್ತಿಯು ತನ್ನ ವಿದ್ಯೆ, ಹಣ, ಶಕ್ತಿ, ಕೀರ್ತಿ, ಶ್ರಮ ಹಾಗೂ ಸಂಘಟನೆಯನ್ನು ಸಮಾಜದ ಮಿಲನಕ್ಕಾಗಿ ಬಳಸಬೇಕೇ ವಿನಃ ಸಮಾಜದ ವಿಭಜನೆಗಾಗಿ ಅಲ್ಲ ಎಂದರು. ವೈಜ್ಞಾನಿಕ ನೆಲೆಗಟ್ಟಿನಲ್ಲಿ ತಮ್ಮ ಮಾತುಗಳನ್ನು ಸಮೀಕರಿಸಿ ಫ್ಯೂಶನ್ ಮತ್ತು ಫಿಶನ್ ಕ್ರೀಯೆಗಳ ನಡುವಿನ ವ್ಯತ್ಯಾಸ ಮತ್ತು ಊರ್ಜಗಳ ಅಂತರವನ್ನು ಮನದಟ್ಟು ಮಾಡಿಕೊಡುತ್ತಾ ಯುವಜನತೆಗೆ ಸಂಸ್ಕಾರವಂತರಾಗಿ, ಹೆಚ್ಚು ವಿದ್ಯಾವಂತರಾಗಿ ಉತ್ತಮ ಮಾರ್ಗದಲ್ಲಿ ಹೆಚ್ಚೆಚ್ಚು ಹಣ ಗಳಿಸಿ, ಸಮಾಜದ ಒಳಿತಿಗಾಗಿ ವಿನಿಯೋಗಿಸಿ. ಸಂಘಟನೆಗಾಗಿ ದುಡಿಯಿರಿ ಎಂದು ಕರೆ ನೀಡಿದರು. ಸಂಗೀತ, ನೃತ್ಯ, ಹಾಡುಗಳು ಮಾನವನ ಮನಸ್ಸಿಗೆ ಮುದನೀಡಿ ಪ್ರಫುಲ್ಲಗೊಳಿಸುತ್ತವೆ, ಫ್ಯೂಶನ್ ಕ್ರೀಯೆಯಂತೆ ಸಂಕ್ರಾತಿ ಮಿಲನದಂತಹ ಕಾರ್ಯಕ್ರಮಗಳು ಸಮಾಜವನ್ನು ಒಂದುಗೂಡಿಸುವಂತಹ ಪರಿಕಲ್ಪನೆಯಾಗಿದೆ ಎಂದು ಹೇಳುತ್ತಾ ಮಕ್ಕಳಿಗೆ ಒಳ್ಳೆಯ ಸಂಸ್ಕಾರವನ್ನು ಕಲಿಸಿ ಎಂದು ಕೆಲವು ನೀತಿಕಥೆಗಳನ್ನು ಹೇಳುವುದರ ಮೂಲಕ ಆಶೀರ್ವಚನ ನೀಡಿ ಹರಸಿದರು.

ಸದರಿ ಕಾರ್ಯಕ್ರಮದಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘದ, ಮಹಿಳೆಯರು ಮತ್ತು ಮಕ್ಕಳು, ಕರ್ನಾಟಕ ಭವನ, ಜನಕಪುರಿ ಮಹಿಳಾ ಮಂಡಳಿ, ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿ, ಹಾಗೂ ದೆಹಲಿಯ ಇತರೆ ಸ್ಥಳೀಯ ಸಂಘ ಸಂಸ್ಥೆಗಳು ನೀಡಿದ ನೃತ್ಯರೂಪಕ ಹಾಗೂ ಹಾಡುಗಳು ನೆರದಿದ್ದ ಪ್ರೇಕ್ಷಕರನ್ನು ರಂಜಿಸಿದವು. ಡಿವಿಜಿಎಸ್ ಸದಸ್ಯರುಗಳು ಹಾಗೂ ಸ್ಥಳೀಯ ಕಲಾವಿದರಿಂದ ಪ್ರದರ್ಶನಗೊಂಡ 'ಅಮ್ಮ' ಕಿರು ನಾಟಕ, ಅತ್ಯದ್ಭುತವಾಗಿ ಮೂಡಿಬಂದು ನೆರದಿದ್ದ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿ ಅಪಾರ ಪ್ರಶಂಸೆಯನ್ನು ಗಳಿಸಿತು. (ಪಾತ್ರ ವರ್ಗ: ಗಿರೀಶ್ ಎಸ್, ನಾರಾಯಣ. ಬಿ, ಹೆಚ್.ಎಸ್ ಜಗದೀಶ್, ಶಂಕರೇಗೌಡ ಎಂ.ಕೆ, ಮೋಹನ್ ಕುಮಾರ್ ಬಿ.ಎನ್, ಕೃಷ್ಣರಾಜ್, ಮಾಸ್ಟರ್ ಧನ್ವಿನ್, ಶ್ರೀಮತಿ ಆಶಾಲತಾ ಎಂ, ಕುಮಾರಿ. ಅವನಿ ನೆಲ್ಲಿ, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಸವಿತಾ ನಾರಾಯಣ್, ಶ್ರೀಮತಿ ಕುಮಾರಿ ಅನಂತ್, ಶ್ರೀಮತಿ ಸೀಮಾ ಬಿರಾದಾರ್, ನಿರ್ದೇಶನ: ಹರಿಪ್ರಿಯ ಎಸ್)

ಬೆಂಗಳೂರಿನ ಶ್ರೀ ಕೆ.ಎಸ್ ಮಂಜುನಾಥ್ ಅವರ ಸ್ವರಾಮೃತ ತಂಡ ಹಾಗು ಶ್ರೀಮತಿ ರೀಮಾ ಮತ್ತು ತಂಡದವರು ನೀಡಿದ ಸುಗಮ ಸಂಗೀತ, ಜಾನಪದ ಸಂಗೀತ ಪ್ರೇಕ್ಷಕರನ್ನು ರಂಜಿಸಿದವು.

ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಜಂಟೀ ಕಾರ್ಯದರ್ಶಿ ಶ್ರೀಮತಿ ಪ್ರತಿಭಾ ಮಂಜುಗೌಡ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಒಟ್ಟಾರೆ ನಿರೂಪಣೆಯನ್ನು ಶ್ರೀ ಅರ್ಜುನ್ ಶರತ್ ಹಾಗೂ ಕುಮಾರಿ ಸ್ವಾತಿ ಎ.ಟಿ. ಶ್ರೀನಿವಾಸ್ ಅವರು ಸುಂದರವಾಗಿ ನಿರ್ವಹಿಸಿದರು. ಜಂಟೀ ಕಾರ್ಯದರ್ಶಿ, ಶ್ರೀ ಎ.ಟಿ ಶ್ರೀನಿವಾಸ್ ಸ್ವಾಗತಿಸಿದರು, ಸದಸ್ಯ ಶ್ರೀ ನಾರಾಯಣ ಬಿ ವಂದಿಸಿದರು. ರಾತ್ರಿಯ ರುಚಿಕರ ಭೋಜನವನ್ನು ದೆಹಲಿ ಕನ್ನಡಿಗರು ಸವಿದರು.




**ನಾರಾಯಣ ಬಿ**

# 74ನೇ ಗಣರಾಜ್ಯೋತ್ಸವ ದಿನಾಚರಣೆ



74ನೇ 'ಗಣರಾಜ್ಯೋತ್ಸವ ದಿನಾಚರಣೆ'ಯನ್ನು ಜ.26, 2023 ರಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಅವರು ಮಾತನಾಡಿ ಗಣರಾಜ್ಯ ರಾಷ್ಟ್ರವಾಗಿ 73 ವರ್ಷಗಳನ್ನು ಪೂರೈಸಿದ ಈ ದಿನವು ನಮ್ಮ ರಾಷ್ಟ್ರದ ಇತಿಹಾಸದಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಹೊಂದಿದೆ. ನಾವೆಲ್ಲರೂ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ ಮತ್ತು ಸರ್ವೋಚ್ಚ ತ್ಯಾಗವನ್ನು ಮರೆಯಬಾರದು. ಸಂವಿಧಾನವನ್ನು ಎತ್ತಿಹಿಡಿಯಲು ಮತ್ತು ಕಾನೂನುಗಳನ್ನು ಪಾಲಿಸಲು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅರಿತುಕೊಳ್ಳುವುದರ ಜೊತೆಗೆ ಉತ್ತಮ ವಿದ್ಯಾವಂತ, ಪ್ರಾಮಾಣಿಕ ಮತ್ತು ಶ್ರಮಶೀಲ ವ್ಯಕ್ತಿಗಳಾಗಿ ರಾಷ್ಟ್ರದ ಪ್ರಗತಿಯತ್ತ ಕೈಜೋಡಿಸೋಣ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ದೇಶಭಕ್ತಿಯನ್ನು ಮೂಡಿಸುವಂತಹ ವರ್ಣರಂಜಿತ ಕಾರ್ಯಕ್ರಮಗಳು, ಗಣರಾಜ್ಯೋತ್ಸವ ಹಾಗೂ ಸಂವಿಧಾನದ ಮಹತ್ವದ ಬಗ್ಗೆ ಭಾಷಣ, ಸುಶ್ರಾವ್ಯವಾದ ದೇಶಭಕ್ತಿಗೀತೆಯು ಪ್ರಸ್ತುತಗೊಂಡಿತು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಉಮೇಶ್ ಬಿ.ಆರ್., ಶಿಕ್ಷಕ-ಶಿಕ್ಷಕೇತರ ವೃಂದ, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಾಲೆಯ ಪ್ರಭಾರ ಪ್ರಾಂಶುಪಾಲ ಬಲ್‌ಬೀರ್ ಸಿಂಗ್ ಸ್ವಾಗತಿಸಿದರು. ಶಿಕ್ಷಕಿ ಶ್ರೀಮತಿ ಪರಿಮಳಾ ವಂದಿಸಿದರು. ಶಿಕ್ಷಕಿ ಬಿದಿಶಾ ಕಾರ್ಯಕ್ರಮ ನಿರೂಪಿಸಿದರು.




**ನಾಟಕವನ್ನು ವೀಕ್ಷಿಸಿದ ಡಾ. ಅವನೀಂದ್ರನಾಥ್ ರಾವ್ ಅವರ ಅನಿಸಿಕೆ :** 'ಮಾನಸಿಕ ಚಿಕಿತ್ಸೆಗಾಗಿ ಮಗನನ್ನು ಮಾನಸಿಕ ಆಸ್ಪತ್ರೆಗೆ ಸೇರಿಸುವ ತಾಯಿ ಸ್ವತಃ ತಾನೇ ಮನೋರೋಗಿಯಾಗುವ ವಿಷಾದದ ಕತೆ ಇಲ್ಲಿದೆ. ನಾಟಕ ನೋಡುತ್ತಿದ್ದಂತೆ ನನಗೆ ಪುಟ್ಟಣ್ಣ ಕಣಗಾಲ ಅವರ 'ಮಾನಸ ಸರೋವರ' ಸಿನಿಮಾ ನೆನಪಾಯಿತು'.

# ದೆಹಲಿ ಕನ್ನಡ ಶಾಲೆಯಲ್ಲಿ ಬೇಂದ್ರೆ ನಮನ

ದಿನಾಂಕ 31-01-2023ರಂದು ದೆಹಲಿ ಕನ್ನಡ ಶಿಕ್ಷಣ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ವರಕವಿ, ಶಬ್ದ ಗಾರುಡಿಗ, ಜ್ಞಾನಪೀಠ ಪುರಸ್ಕೃತ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ ಜನ್ಮದಿನದ ಪ್ರಯುಕ್ತ ಕನ್ನಡ ಕೊಠಡಿಯಲ್ಲಿ ಬೇಂದ್ರೆ ನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಶಾಲೆಯ ಪ್ರಭಾರ ಪ್ರಾಂಶುಪಾಲೆ ಶ್ರೀಮತಿ ಎನ್. ವಿಜಯಕುಮಾರಿ ಅವರು ಕವಿ ಬೇಂದ್ರೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದು ಸಾಹಿತಿಗಳ ಕೃತಿಗಳ ಜೊತೆಗೆ ಅವರ ಬದುಕು ಕೂಡ ಮೌಲ್ಯಯುತವಾದುದು, ವಿದ್ಯಾರ್ಥಿಗಳು ಜ್ಞಾನದಾಹಕ್ಕಾಗಿ ಪಠ್ಯ ಪುಸ್ತಕವನ್ನು ಮಾತ್ರ ಅವಲಂಭಿಸದೆ ಶ್ರೇಷ್ಠ ಸಾಹಿತಿಗಳ, ಮಹನೀಯರ ಬದುಕು ಬರಹದ ಬಗ್ಗೆಯೂ ತಿಳಿಯಲು ಜ್ಞಾನಪೀಠ ಪುರಸ್ಕೃತ ಸಾಹಿತಿಗಳನ್ನು ಪ್ರತಿವರ್ಷ ಶಾಲೆಯಲ್ಲಿ ಅರ್ಥಪೂರ್ಣವಾಗಿ ನೆನೆಯುತ್ತಿರುವುದು ಅನುಕರಣೀಯ ಎಂದರು.

ಶಾಲೆಯ ವಿದ್ಯಾರ್ಥಿಗಳು ಬೇಂದ್ರೆ ವಿರಚಿತ ಗೀತೆಗಳ ಗಾಯನ, ಬೇಂದ್ರೆ ಅವರ ಕುರಿತ ವಿಚಾರಗಳನ್ನು ಮಂಡಿಸಿದರು. ಶಿಖಾ ಘಾಳೆ, ವಾಣಿ ಬೆನ್ನೂರು, ಶ್ರೇಯಾಶ್ರೀ, ಜಯಶ್ರೀ ಅವರಿಂದ 'ಮುಗಿಲ ಮಾರಿಗೆ ರಾಗರತಿಯ' ಭಾವಗೀತೆ ಪ್ರಸ್ತುತಿ ಹಾಗೂ ನೀಕ್ಷಿತ್ ಕೆ., ಸುಮಂತ್ ಆಚಾರ್ಯ, ಸಾತ್ವಿಕ್ ತೇಲಿ, ಅಪೇಕ್ಷಾ ಹಾಗೂ ನಂದಿತಾ ಉಭಾಳೆ ಅವರಿಂದ ಬೇಂದ್ರೆ ಅವರ ಬದುಕು-ಬರಹ ಕುರಿತ ವಿಚಾರ ಮಂಡನೆ ಚೆನ್ನಾಗಿ ಮೂಡಿ ಬಂತು. ಕಾರ್ಯಕ್ರಮದಲ್ಲಿ ಶಾಲೆಯ ಅನೇಕ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಉಪಸ್ಥಿತರಿದ್ದರು. ಉಪನ್ಯಾಸಕ ನಾಗರಾಜ ಎಂ. ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಿಕ್ಷಕರಾದ ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್ ಸ್ವಾಗತಿಸಿದರು. ಎಚ್. ಎಸ್. ತೇಲಿ ವಂದಿಸಿದರು. ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು.



**ಅರವಿಂದ ಬಿಜ್ಜೈ**

# 'ನನ್ನ ದೇಶ, ನನ್ನ ಹೆಮ್ಮೆ' ದೇಶಭಕ್ತಿ ಮೆರೆದ ದೆಹಲಿಯ ಕನ್ನಡ ಮಕ್ಕಳು

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕವು ದಿನಾಂಕ 30.01.2023, ಸೋಮವಾರ ಸಂಜೆ 07:00 ಗಂಟೆಗೆ 74ನೇ ಗಣರಾಜ್ಯೋತ್ಸವದ ಅಂಗವಾಗಿ ಎಳೆಯ ಮನಸ್ಸುಗಳಲ್ಲಿ ರಾಷ್ಟ್ರಪ್ರೇಮದ ಜಾಗೃತಿಯನ್ನು ಒಡಮೂಡಿಸುವ 'ನನ್ನ ದೇಶ ನನ್ನ ಹೆಮ್ಮೆ 'ಎಂಬ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿತವಾದ ವಿನೂತನ ಕಾರ್ಯಕ್ರಮವನ್ನು ನಿಸ್ತಂತು ಮಾಧ್ಯಮದ ಮೂಲಕ ಆಯೋಜಿಸಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಕುಂದಾಪುರದ ಮಾಜಿ ಸೈನಿಕರು ಮತ್ತು ಸಮಾಜ ಸೇವಕರಾದ ಶ್ರೀ ಬೆಳ್ಳಾಲ ಗೋಪಿನಾಥ್ ರಾವ್ ಅವರು ಮಾತನಾಡಿ ಸೈನಿಕರ ಮತ್ತು ವಿದ್ಯಾರ್ಥಿಗಳ ಜೀವನದ ರೀತಿನೀತಿಗಳು ಸಮಾನವಾಗಿದೆ. ಶಿಸ್ತು, ಸಮಯಪಾಲನೆ, ದಕ್ಷತೆ, ಆತ್ಮವಿಶ್ವಾಸ, ದೃಢಸಂಕಲ್ಪ ಮುಂತಾದ ಗುಣಗಳು ಇಬ್ಬರಲ್ಲಿಯೂ ಇರಲೇಬೇಕಾದುದು. ಜೀವನ ಮೌಲ್ಯಗಳೊಂದಿಗೆ ಸ್ವಚ್ಛ ಪರಿಸರವನ್ನು ನಿರ್ಮಾಣ ಮಾಡಿ ಆದರ್ಶದ ಜೊತೆಗೆ ಸಾಗುವ ಜೀವನವೇ ನಿಜವಾದ ದೇಶಪ್ರೇಮ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕಾರ್ಗಿಲ್ ಯುದ್ಧ ಸಂದರ್ಭದ ಘಟನೆಗಳನ್ನು, ತಮ್ಮ ಅನುಭವಗಳನ್ನು ಮಕ್ಕಳೊಂದಿಗೆ ಹಂಚಿಕೊಂಡರು.

ಗೌರವ ಉಪಸ್ಥಿತಿ ವಹಿಸಿ ಮಾತನಾಡಿದ ಕ.ರಾ. ಮ.ಸಾ.ಪ ದೆಹಲಿ ಘಟಕದ ಗೌರವಾಧ್ಯಕ್ಷ ಶ್ರೀ ಜಯರಾಜ್ ಪಿ. ಅವರು ರಾಷ್ಟ್ರೀಯ ಹಬ್ಬಗಳು ಕೇವಲ ಹಬ್ಬಗಳಾಗದೆ ಇಂತಹ ಆಚರಣೆಯ ಹಿನ್ನೆಲೆಯನ್ನು ಕಾರ್ಯಕ್ರಮದ ಮೂಲಕ ಮಕ್ಕಳಿಗೆ ತಿಳಿ ಹೇಳಿಕೊಡುವ ಮೂಲಕ ಎಳವೆಯಿಂದಲೇ ಅವರಲ್ಲಿ ರಾಷ್ಟ್ರಪ್ರೇಮವನ್ನು ಬೆಳೆಸುವ ಕರ್ತವ್ಯ ನಮ್ಮದು ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲ ಮಕ್ಕಳಿಗೂ ಶುಭ ಹಾರೈಸಿದರು.

ಕು. ಜೈನಬ್ 'ಐದು ಬೆರಳು ಕೂಡಿ ಒಂದು ಮುಷ್ಟಿಯು' ಹಾಗೂ ಮಾಸ್ಟರ್ ಮೊಹಮ್ಮದ್ ಸಾಹಿಲ್ 'ಹಿಂದುಸ್ಥಾನವು ಎಂದೂ ಮರೆಯದ ಭಾರತ ರತ್ನವು ನೀನಾಗು' ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಿದರು. ಮಾ. ಸುಮಂತ್ ಆಚಾರ್ಯ ಗಣರಾಜ್ಯೋತ್ಸವದ ಮಹತ್ವ ವಿಷಯದ ಮೇಲೆ ಅರ್ಥಪೂರ್ಣವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪರಿಷತ್ತಿನ ಕೇಂದ್ರ ಘಟಕದ ಸಂಘಟನಾ ಕಾರ್ಯದರ್ಶಿ ಅರುಣ್, ಚಿಕ್ಕಮಗಳೂರು ಮಕ್ಕಳ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಸುಧೀರ್ ಮಲ್ಲಿಗೆ, ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಅನೇಕ ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು. ಮಾ. ರಿಶ್ವಿನ್ ಡಿ. ಅವರು ಪ್ರಾರ್ಥಿಸಿದರು. ಕು. ಅಪೇಕ್ಷಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಾಯಿಶ್ರೀ ದೇಸಾಯಿ ಸ್ವಾಗತಿಸಿದರು. ಮಾ.ನೀಕ್ಷಿತ್ ಕೆ. ಅತಿಥಿ ಪರಿಚಯ ನೀಡಿದರು. ಮಾ. ಸಾತ್ವಿಕ್ ತೇಲಿ ವಂದಿಸಿದರು. ಕು. ಸೃಷ್ಟಿ ಪೂಜಾರಿ ಕಾರ್ಯಕ್ರಮ ನಿರೂಪಿಸಿದರು.

**ಅರವಿಂದ ಬಿಜ್ಜೈ**

# ಆತ್ಮೀಯತೆಯಿಂದ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮದ ಆಮಂತ್ರಣ ಸ್ವೀಕರಿಸಿದ ಮೈಸೂರು ರಾಜರು

ಕರ್ನಾಟಕದ ಸಾಂಸ್ಕೃತಿಕ ನಗರಿ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಅರಮನೆಗಳ ನಗರ ಸುಂದರವಾಗಿ ನಿರ್ಮಿಸಲ್ಪಟ್ಟಿತು. ಇಂತಹ ಭವ್ಯವಾದ ನಗರವನ್ನು ರಾಜಧಾನಿಯಾಗಿರಿಸಿಕೊಂಡು ಆಳ್ವಿಕೆ ನಡೆಸಿದ ರಾಜಮನೆತನ ಮೈಸೂರು ಒಡೆಯರು. ಇಂದಿನ ಸರ್ಕಾರಗಳು ಕಾಣುತ್ತಿರುವ ಆಧುನಿಕತೆಯನ್ನು ಅಂದೇ ಗಮನದಲ್ಲಿಟ್ಟುಕೊಂಡು ಆಳ್ವಿಕೆ ನಡೆಸಿದ ಅರಸರು ಕೃಷಿ, ನೀರಾವರಿ, ಶಿಕ್ಷಣ, ವೈದ್ಯಕೀಯ, ತಾಂತ್ರಿಕತೆ, ಸಂಸ್ಕೃತಿ ಹಾಗೂ ಕನ್ನಡ ಭಾಷೆಯ ಅಭಿವೃದ್ಧಿಗೆ ನೀಡಿರುವ ಯೋಜನೆಗಳು ಅಪಾರ. ಅಂತಹ ರಾಜವಂಶದ ಈಗಿನ ರಾಜರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರನ್ನು ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸಮಾರೋಪ ಸಮಾರಂಭದ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಲು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಶ್ರೀ ಡಿ. ತಿಮ್ಮಪ್ಪ ಗೌಡ ಮತ್ತು ಶ್ರೀ ಪುಟ್ಟೇಗೌಡ ಅವರೊಂದಿಗೆ ಅರಮನೆಯಲ್ಲಿ ಭೇಟಿಯಾಗಿ ಆಹ್ವಾನಿಸಿದೆವು. ರಾಜರು, ರಾಜಮನೆತನ ಹಾಗೂ ರಾಜವಂಶದ ಬಗ್ಗೆ ಇತಿಹಾಸದಲ್ಲಿ ಓದಿದ್ದು ಬಿಟ್ಟರೆ ಪ್ರತ್ಯಕ್ಷವಾಗಿ ನೋಡುವ ಹಾಗೂ ಭೇಟಿಯಾಗುವ ಭಾಗ್ಯ ಸಿಗುವುದು ನಮ್ಮ ಪೀಳಿಗೆಗೆ ಬಹಳ ಕಡಿಮೆ. ರಾಜಕಾರಣಿಗಳನ್ನೇ ರಾಜರಂತೆ ನೋಡಿ ಬೆಳೆದ ನಾವುಗಳು ಅವರೇ ನಾಡಿನ ಒಡೆಯರು ಎಂದು ಭಾವಿಸುತ್ತೇವೆ. ಇಂದಿನ ಮೈಸೂರು ಒಡೆಯರನ್ನು ಕಂಡಾಗ ರಾಜಗಾಂಭೀರ್ಯತೆ ಎಂಬ ಪದದ ಅರ್ಥ ತಿಳಿದಿದ್ದು ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರನ್ನು ಭೇಟಿಯಾದಾಗ. ಅವರ ಸಮಯ ಪ್ರಜ್ಞೆ, ನಮ್ಮನ್ನು ಉಪಚರಿಸಿದ ರೀತಿ ಹಾಗೂ ನಮ್ಮ ಕಾರ್ಯಕ್ರಮದ ಬಗ್ಗೆ ಆಸಕ್ತಿಯಿಂದ ಪೂರ್ಣ ವಿವರವನ್ನು ತಿಳಿದುಕೊಂಡು ನಮ್ಮ ಕಾರ್ಯಕ್ರಮಕ್ಕೆ ಬರುವುದಾಗಿ ಒಪ್ಪಿಗೆ ತಿಳಿಸಿದ





ರೀತಿ ಮರೆಯಲಾಗದ ಕ್ಷಣ. ಮೈಸೂರು ರಾಜ ಮನೆತನದ ಈಗಿನ ರಾಜರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರು ನಮ್ಮ ನಾಡಿನಲ್ಲಿರುವುದು ನಮಗೆಲ್ಲ ಹೆಮ್ಮೆಯ ಮತ್ತು ಗೌರವದ ವಿಷಯ.

***ಸಂತೋಷ ಜೆ.***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS
A HOUSE OF QUALITY PRINTING

B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimata
Feb -2023, Vol. No.33, Issue No. 5, Price Rs.1/-
RNI Regn. No. 53405/91, DL-SW-01/4016/22-24
Date of Publication : Feb 8th / 9th, Posting Date : 10th / 11th, Total Pages-20, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

## ಜನವರಿ ೨೨, ೨೦೨೩ ರಂದು ಸಂಘದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ಕನಸಿನ ಅಖಂಡ ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕಲೆ ಮತ್ತು ಸಾಂಸ್ಕೃತಿಕ ಹಬ್ಬದ ಆಯ್ದ ಛಾಯಾಚಿತ್ರಗಳು







